

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 | Issue : 160 | Friday 28-02-2025 | E-mail : maruti.b.hosamani76@gmail.com | Page: 4 | Price : Rs. 1/-


## ಶ್ರೀ ಗುರು ವೀರಘಂಟಿ ಮಡಿವಾಳೇಶ್ವರ ದೇವಸ್ಥಾನದ ಆವರಣದಲ್ಲಿ ಮಹಾ ಶಿವರಾತ್ರಿ ಆಚರಣೆ





**ಸಿಹಿ ಕಹಿ ಸುದ್ದಿ,**

**ಕಲಕೇರಿ :** ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಕಲಕೇರಿ ಗ್ರಾಮದ ಅಭಯ ಶ್ರೀಗಳ ದಿವ್ಯ ಸಾನಿಧ್ಯದಲ್ಲಿ ಶ್ರೀ ಗುರು ವೀರಘಂಟಿ ಮಡಿವಾಳೇಶ್ವರ ದೇವಸ್ಥಾನದ ಆವರಣದಲ್ಲಿ ಮಹಾ ಶಿವರಾತ್ರಿ ಜಾಗರಣಾ 13. ಉತ್ಸವ ಶಿವನ ಧ್ಯಾನ ಮಾಡಿ ಉಪವಾಸ ಮಾಡಿ ಆ ಪರಮಾತ್ಮನಿಗೆ ಪಾತ್ರರಾದರು ಸಾವಿರಾರು ಭಕ್ತರು ಮತ್ತು ತಾಯಂದಿರು ಅನೇಕ ವಿಶೇಷ ಕಲಾ ಸಿಂಚನ ಮೆಲೋಡಿಸಿ ಇವರಿಂದ ಕಾರ್ಯಕ್ರಮಗಳು ಜರಗುವುದು. ಈ ಕಾರ್ಯಕ್ರಮದ ಸಾನಿಧ್ಯ ಪರಮಪೂಜ್ಯ ಸಿದ್ದರಾಮ ಶಿವಾಚಾರ್ಯ ಶ್ರೀ ಗುರು ಮರಳಾರಾಧ್ಯ ಹಿರೇಮಠ್ ಇವರು ಪ್ರತಿ ವರ್ಷ ಅಪ್ಪು ದೇಸಾಯಿ ಬಳಗ ದಿಂದ ಮಹಾ ಶಿವರಾತ್ರಿ ಜಾಗರಣಾ ಕಾರ್ಯಕ್ರಮ ಅದ್ದೂರಿಯಿಂದ ಅನೇಕ ರಾಜಕಾರಣಿಗಳಿಗೆ ಹಾಗೂ ಊರಿನ ಹಿರಿಯರಿಗೆ ಎಲ್ಲಾ ಪೂಜ್ಯರಿಗೆ ವೇದಿಕೆಗೆ ಬರ ಮಾಡಿಕೊಂಡು ಪ್ರತಿ ವರ್ಷನು ಅಪ್ಪು ದೇಸಾಯಿ ಇವರ ಬಳಗ ವತಿಯಿಂದ ಕಾರ್ಯಕ್ರಮಗಳು ಮಾಡಿ ಎಲ್ಲಾ ಪೂಜ್ಯರ ಆಶೀರ್ವಾದ ಸದಾ ಅವರ ಮೇಲೆ ಇರಲಿ ಎಂದು ಆಶೀರ್ವಚನ ನೀಡಿದರು. ಅದ್ವೈತಾನಂದ ಗುರೂಜಿ ಧ್ಯಾನ ಶಿವಯೋಗಿ ಸಿದ್ದೇಶ್ವರ ಆಶ್ರಮ ವಿಜಯಪುರ ಇವರಿಂದ ಆಶೀರ್ವಚನ ನೀಡಿದರು. ಪ್ರಭುಗೌಡ ಲಿಂಗದಳ್ಳಿ ಅನುಗ್ರಹ ಕಣ್ಣಿನ ಆಸ್ಪತ್ರೆ ವಿಜಯಪುರ ಇವರು ಮಹಾ ಶಿವರಾತ್ರಿ ಅಂದರೆ ಏನು ನಾವೆಲ್ಲರೂ ಜೀವನ ಧ್ಯಾನ ಮಾಡುತ್ತ ನಾವು ಮಾಡಿದಂತ ಪಾಪಗಳನ್ನು ಕಳೆದು ಕೊಳ್ಳಬೇಕು ಎಲ್ಲರೂ ಉಪವಾಸ ಮಾಡಿ ಆ ಶಿವನ ಧ್ಯಾನ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು. ಸಿದ್ದು ಬುಳ್ಳ ಈ ಸಂದರ್ಭದಲ್ಲಿ ವರ್ಷಕ್ಕೆ ಒಮ್ಮೆ ಬರುವುದು ಮಹಾ ಶಿವರಾತ್ರಿಯಲ್ಲಿ ಎಲ್ಲರೂ ಆ ಶಿವನ ಧ್ಯಾನ ಮಾಡಿ ಪುನೀತರಾಗಬೇಕು ಎಂದು ತಿಳಿಸಿದರು. ಕಲಕೇರಿಯ ಪೋಲೀಸ್ ಠಾಣೆಯ ಪಿ.ಎಸ್.ಐ. ಸುರೇಶ್ ಮಂಟೂರ್ ಇವರು ಈ ಸಂದರ್ಭದಲ್ಲಿ ಅಪ್ಪು ದೇಸಾಯಿ ಇವರ ಅದ್ಭುತ ಕಾರ್ಯಕ್ರಮಗಳನ್ನು ಬಹಳ ಚೆನ್ನಾಗಿ ನಡೆಸಿದ್ದಾರೆ. ಮಹಾ ಶಿವರಾತ್ರಿ ಹಬ್ಬ ಇದು ಒಂದು ಕಲಕೇರಿಯಲ್ಲಿ ದೊಡ್ಡ ಜಾತ್ರೆ ಯಾವ ರೀತಿ ಆಗುತ್ತೆ ಅದೇ ರೀತಿ ಬಹಳ ಚೆನ್ನಾಗಿ ಅನೇಕ ಕಾರ್ಯಕ್ರಮಗಳು ಮಾಡಿಸಿದಂತ ಅಪ್ಪು ದೇಸಾಯಿ ಇವರಿಗೆ ಎಷ್ಟು ಹೊಗಳಿದರು ಕಡಿಮೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು. ರವಿ ಗುಮಶೆಟ್ಟಿ ಮಹಾ ಶಿವರಾತ್ರಿ 13. ನೇ ಉತ್ಸವ ಬಹಳ ವಿಜೃಂಭಣೆಯಿಂದ ಜರಗಿತು. ಪರಮಾತ್ಮ ಅಪ್ಪು ದೇಸಾಯಿ ಬಳಗಕ್ಕೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಮಾಡುವಂತೆ ಆ ಪರಮಾತ್ಮ ಆಶೀರ್ವಾದ ಸದಾ ಅವರ ಮೇಲೆ ಇರಲಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಲಕೇರಿಯ 10 ಹಳ್ಳಿಗಳಿಗೆ ಮನೆಗೆ ಮಗನಾದ ಅಪ್ಪು ದೇಸಾಯಿ ಇವರು ಎಲ್ಲಾ ಧರ್ಮಗಳು ಒಂದೇ ನಾವು ಎಲ್ಲರೂ ಒಂದೇ ಎನ್ನುವ ಮಾತುಗಳನ್ನು ಯಾವುದೇ ಕಾರ್ಯಕ್ರಮಗಳು ಇದ್ದರು ಕಾರ್ಯಕ್ರಮಗಳು ನಮ್ಮದೇ ಎಂದು ಅಪ್ಪು ದೇಸಾಯಿ ಇವರ ಬಳಗ ಚಾಚು ತಪ್ಪದೇ ಕಾರ್ಯಕ್ರಮಗಳು ಅದ್ದೂರಿಯಿಂದ ಮಾಡಿದಂತ ಎಲ್ಲಾ ಕಾರ್ಯಕ್ರಮಗಳು ಅಪ್ಪು ದೇಸಾಯಿ ಬಳಗದ ವತಿಯಿಂದ ಅದ್ದೂರಿಯಿಂದ ನಡೆಯಿತು. ಗ್ರಾಮದ ಶ್ರೀ ಸಣ್ಣ ಶರವಯ್ಯ ಗದ್ದಿಗಿ ಮಠ. ಸಂತೋಷ್ ಗೌಡ ದೊಡ್ಡಮನಿ. ದೇವೇಂದ್ರ ಜಂಬಿಗಿ. ಶ್ರೀಶೈಲ್ ವಿಶ್ವಕರ್ಮ. ದತ್ತು ಮೋಪಗಾರ. ಮುನ್ನ ಸಿರಸಗಿ. ಕನಕರಾಜ್ ವಡ್ಡರ್. ಅಶೋಕ್ ಭೋವಿ. ವಿನೋದ್ ವಡಿಗೇರಿ. ರವಿ ಹಿರೇಮಠ. ಅಜೀಜ್ ಮುಲ್ಲಾ. ಹಣಮಂತ್ ವಡ್ಡರ್. ಪರಶುರಾಮ್ ವಡ್ಡರ್. ಎಲ್ಲಾ ಮಹಾ ಶಿವರಾತ್ರಿಯ ಜಾಗರಣಾ ಕಾರ್ಯಕ್ರಮಗಳು ಅಪ್ಪು ದೇಸಾಯಿ ಇವರ ಬಳಗದ ವತಿಯಿಂದ ಜರುಗಿತು.

ಮಹಾ ಶಿವರಾತ್ರಿಯ ಕಾರ್ಯಕ್ರಮ ನಿರೂಪಣೆಗಾರರು ಈರಣ್ಣ ಝುಳಕಿ. ಶಿವಕುಮಾರ್ ಸಜ್ಜನ್. ಅನೇಕ ಊರಿನ ಸಾರ್ವಜನಿಕರು ತಾಯಂದಿರು ಸೇರಿದಂತೆ ಮಹಾ ಶಿವರಾತ್ರಿಯ ಜಾಗರಣಾ ಅದ್ದೂರಿಯಿಂದ ನಡೆಯಿತು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ. ತಾಳಿಕೋಟೆ**

## ಮಹಾ ಶಿವರಾತ್ರಿ ದಿನ, ಗುಡ್ಡದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಭಾಗಿ

**ಸಿಹಿ ಕಹಿ ಸುದ್ದಿ,**

**ಹುನಗುಂದ :** ಶಿವ ಶಿವ ಎಂದರೇ ಭಯವಿಲ್ಲ, ಶಿವ ನಾಮಕೆ ಸಾಟಿ ಬೇರಿಲ್ಲ. ಎನ್ನುವ ಶಿವನಾಮ ಸ್ಮರಣೆಯ ಹಾಡು ಪ್ರತಿಯೊಬ್ಬರ ಮನೆ ಮನದಲ್ಲಿ ಮತ್ತು ಸ್ಮೃತಿ ಪಟಲದಲ್ಲಿ ಹಾಗೂ ಶಿವನ ಭಕ್ತರ ನಾಲಿಗೆಯಲ್ಲಿ ಹರಿದಾಡಿದಂತೂ ಸತ್ಯ. ಮಹಾಶಿವರಾತ್ರಿಯ ಪ್ರಯುಕ್ತ ಉಪವಾಸ ವ್ರತಾಚರಣೆಯ ಸಾವಿರಾರು ಭಕ್ತರು ನಸುಕಿನಲ್ಲಿ ದೇವಸ್ಥಾನಕ್ಕೆ ತೆರಳಿ ವಿಶೇಷ ದರ್ಶನ ಪಡೆದು ಪೂಜೆ ಪುನಸ್ಕಾರ, ಅರ್ಚನೆ, ಅಭಿಷೇಕ, ನೈವೇದ್ಯ ಮಾಡಿಸಿ ಸ್ವಲ್ಪ ಹೊತ್ತು ದೇವಸ್ಥಾನದಲ್ಲಿ ವಿಶ್ರಮಿಸಿ ಶಿವನ ನಾಮ ಸ್ಮರಣೆಯಲ್ಲಿ ಸಹಸ್ರಾರು ಸಂಖ್ಯೆಯ ಶಿವನ ಭಕ್ತರು ಮರಳಿ ಮನೆಗೆ ತೆರಳುತ್ತಿರುವ ವಿಶೇಷ ದೃಶ್ಯವೂ ಶಿವಯೋಗದ ದಿನವಾದ ಬುಧವಾರ ಹುನಗುಂದ ಪಟ್ಟಣದ ಗುಡ್ಡದ ಮೇಲೆ ವಾಸವಾಗಿರುವ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಕಂಡು ಬಂದಿತು.

ನಸುಕಿನಿಂದಲೇ ಭಕ್ತರ ಓಂಕಾರ ನಾದ ಶ್ರೀ ಮಲ್ಲಿಕಾರ್ಜುನ ದೇವಾಲಯದ ಸುತ್ತಮುತ್ತಲು ಮೊಳಗಿತು. ಭಕ್ತರು ನಸುಕಿನಿಂದಲೇ ಹಣ್ಣು ಕಾಯಿ ಹೂ ಹಾರಗಳನ್ನು ದೇವರಿಗೆ ಸಮರ್ಪಿಸಿ ಅರ್ಚನೆ ನೆರವೇರಿಸಿದರು. ಮಹಾ ಮಂಗಳಾರತಿ ಮಾಡಿ, ಧೂಪ ದೀಪ ಬೆಳಗಿ, ಸಂಕಲ್ಪ ಸಿದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಶಿವ ದೇವಾಲಯದಲ್ಲಿ ಶಿವನ ಅನುಗ್ರಹಕ್ಕಾಗಿ ಶಿವ ಪೂಜೆ ಮತ್ತು ಉಪವಾಸ ವ್ರತ ಮಾಡಿ, ಲಿಂಗಗಳಿಗೆ ಎಳೆನೀರು, ಜೇನು, ಹಾಲು ಮೊಸರು, ತುಪ್ಪ ಬಳಸಿ ಜಲಾಭಿಷೇಕ, ಕ್ಷೀರಾಭಿಷೇಕ ಮಾಡಲಾಯಿತು. ಈ ವೇಳೆ ಪೂಜೆಯಲ್ಲಿ ಪಾಲ್ಗೊಂಡ ಭಕ್ತರು ಭಕ್ತಿಯಿಂದ ಓಂ ನಮಃ ಶಿವಾಯ ಹಾಗೂ ಶಿವ ಸಹಸ್ರನಾಮ ಪಠಿಸಿದರು. ಕೊನೆಯಲ್ಲಿ ತೀರ್ಥ ಪ್ರಸಾದ ಸ್ವೀಕರಿಸಿದರು.



ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ವಿಶೇಷ ಅಲಂಕಾರ ಮಹಾ ಶಿವರಾತ್ರಿಯ ಎರಡು ದಿನ ಮುಂಚೆ ಶ್ರೀ ಮಲ್ಲಿಕಾರ್ಜುನ ದೇವಸ್ಥಾನವನ್ನು ಭಕ್ತರು ತಳಿರು ತೋರಣಗಳಿಂದ ಮತ್ತು ದೀಪಾಲಂಕಾರ ದಿಂದ ಅಲಂಕರಿಸಲಾಗಿತ್ತು.

ಸಾವಿರಾರು ಸಂಖ್ಯೆಯಲ್ಲಿ ಜನಸ್ತೋಮ-ಯ ಶಿವಯೋಗದ ದಿನ ಶಿವನ ಆರಾಧಕರು ಬೆಳಗಿನಿಂದ ಸಾಯಂಕಾಲದ ವರೆಗೂ ಶ್ರೀ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಆಗಮಿಸಿ ವ್ರತ ಆಚರಣೆಯಲ್ಲಿ ತೊಡಗಿದ್ದು ಕಂಡು ಬರುವುದರ ಜೊತೆಗೆ ಸಾವಿರಾರು ಸಂ-ಖ್ಯೆಯ ಜನಸ್ತೋಮ ಅಲ್ಲಿ ಕಂಡು ಬಂದಿದ್ದು ವಿಶೇಷವಾಗಿತ್ತು.

ಶಿವರಾತ್ರಿಯ ಕುಂಭ ಮೇಳಕ್ಕೆ ಚಾಲನೆ ನೀಡಿದ ಕಾಶಪ್ಪನವರ, ಮಹಾ ಶಿವರಾತ್ರಿಯ ಪ್ರಯುಕ್ತ 501 ಕುಂಭಮೇಳ ಮತ್ತು ಶಿವನ ಭಾವ ಚಿತ್ರದ ಮೆರವಣಿಗೆಗೆ ಹುನಗುಂದ ಮತ ಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರ ಪಟ್ಟಣದ ಪೊಲೀಸ್ ಠಾಣೆ ಹತ್ತಿರದ ಆಂಜನೇಯ ದೇವಸ್ಥಾನದ ಬಳಿ ಉದ್ಘಾಟಿಸಿ ಚಾಲನೆ ನೀಡಿದರು. ಅಲ್ಲಿಂದ ಸಂಗಮೇಶ್ವರ ದೇವಸ್ಥಾನ, ಮೇನ್ ಬಜಾರ್, ಲಿಂಗದಕಟ್ಟಿ, ಮೇಗಲಪೇಟೆ ಮಾರ್ಗವಾಗಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಕುಂಭ ಮೇಳ ಮತ್ತು ಮೆರವಣಿಗೆ ತೆರಳಿತು.ಈ ವೇಳೆ ಬಿಲ್ಕೆರೂರ ಬಿಲ್ವಾಶ್ರಮ ಸಂಸ್ಥಾನ ಹಿರೇಮಠದ ಸಿದ್ದಲಿಂಗ ಶಿವಾಚಾರ್ಯ ಮಹಾ ಸ್ವಾಮಿಗಳು, ಗಚ್ಚಿನಮಠದ

ಅಮರೇಶ್ವರ ದೇವರು,ಪುರಸಭೆ ಅಧ್ಯಕ್ಷೆ ಭಾಗ್ಯ ಶ್ರೀ ರೇವಡಿ,ಉಪಾಧ್ಯಕ್ಷೆ ರಾಜಮ್ಮ ಬದಾಮಿ, ದೇವಸ್ಥಾನ ಸಮಿತಿ ಕಾರ್ಯಾಧ್ಯಕ್ಷ ಶಶಿಕಾಂತ ಪಾಟೀಲ, ಅಧ್ಯಕ್ಷ ಬಸವರಾಜ ಹೊಸೂರ, ಪುರಸಭೆ ಸದಸ್ಯ ಪ್ರವೀಣ ಹಳಪೇಟಿ, ಮುಖಂಡರಾದ ಶಿವಾನಂದ ಕಂಠಿ, ಸಂಗಣ್ಣ ಗಂಜಿಹಾಳ, ಅಮರೇಶ ನಾಗೂರ ಸೇರಿದಂತೆ ಅನೇಕರು ಇದ್ದರು.

**ತಾಲೂಕ ವರದಿಗಾರರು ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ.ಬಿ.ಬಂಡರಗಲ್ಲ. ಹುನಗುಂದ**

## ಮಾನ್ವಿ ತಾಲೂಕಿನ ಜನರೇ ಎಚ್ಚರ ಕಳ್ಳರು ಬರುತ್ತಿದ್ದಾರೆ ಎಚ್ಚರಾ

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಮಾನ್ವಿ ತಾಲೂಕಿನ ಜನತೆ ಎಚ್ಚರ ಎಚ್ಚರ ಯಾಕಂದರೆ ಬಂಧು ಬಳಗದವರ ಮನೆಯಲ್ಲಿ ಜಾತ್ರೆ, ಮದುವೆ ಇದೆ ಎಂದು ಹೋದರೆ ನಿಮ್ಮ ಮನೆಗೆ ಕಳ್ಳರು ನುಗ್ಗಿ ಬಂಗಾರ ಹಣ ಸೇರಿದಂತೆ ಬೈಕ್ ದೋಚುವುದು ಗ್ಯಾರಂಟಿ ಗ್ಯಾರಂಟಿ.



ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಪೋತ್ನಾಳ್ ಗ್ರಾಮದ ಲಕ್ಷ್ಮಿಕಾಂತರಡ್ಡಿ ಅವರು ಯಾಪಲಪರ್ವಿ ಗ್ರಾಮದಲ್ಲಿ ಜಾತ್ರೆ ಇದೆ ಎಂದು ಮನೆಗೆ ಬೀಗ ಹಾಕಿ ತೆರಳಿದ್ದಾರೆ. ಮನೆಗೆ ಬೀಗ ಹಾಕಿರುವುದನ್ನು ಮನಗಂಡ ಖದೀಮರು ಬೀಗ ಮುರಿದು ಮನೆಯಲ್ಲಿದ್ದ ಒಟ್ಟು 6 ಲಕ್ಷ ಮೌಲ್ಯದ ಬಂಗಾರ ಹಣ ಕದ್ದು ಪರಾ-ರಿಯಾಗಿದ್ದಾರೆ.

ಮಾನ್ವಿ ತಾಲೂಕಿನ ಬೈಕ್ ಕಳ್ಳತನ ಹಾಗೂ ಮನೆ ಗಳ್ಳತನ ಹೆಚ್ಚಾಗುತ್ತಿದ್ದು ಪೊಲೀಸ್ ಇಲಾಖೆಗೆ ಕಳ್ಳರೆ ಸವಾಲಾಗಿದ್ದಾರೆ. ಕಳ್ಳರು ಯಾವ ಗ್ಯಾಂಗ್ ನವರು ಯಾವ ಭಾಗದವರು ಲಗ್ಗೆ ಇಟ್ಟಿದ್ದಾರೆಂದು ತನಿಖೆಯಿಂದ ತಿಳಿಯಲಿದ್ದು. ಮಾನ್ವಿ ಪೊಲೀಸ್ ಇಲಾಖೆಯವರು ನಾನಾ ರೀತಿಯಲ್ಲಿ ತಲಾಶ್ ನಡೆಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಗುಂಡಕನಾಳ ಮಠವು ಶಕ್ತಿಪೀಠ ಮಠ: ಜಾಲಹಳ್ಳಿಶ್ರೀ

**ತಾಳಿಕೋಟೆ :** ಗುಂಡಕನಾಳ ಗ್ರಾಮದ ಬೃಹನ್ ಮಠವು ಪ್ರಾಚೀನ ಪರಂಪರೆಯನ್ನು ಹೊಂದಿದ ಶಕ್ತಿಪೀಠ ಮಠವಾಗಿದೆ ಈ ಹಿಂದಿನ ಲಿಂಗೈಕ್ಯಶ್ರೀಗಳು ಮಾಡಿದ ಪವಾಡ ಸದೃಶ್ಯಗಳನ್ನು ಬಾನೇತ್ತರಕ್ಕೆ ಪರಿಚಯಿಸುವದರೊಂದಿಗೆ ಭಕ್ತರನ್ನು ಸನ್ಮಾರ್ಗದೆಡೆ ಕೊಂಡೊಯುವ ಕಾರ್ಯ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮಾಡುತ್ತಾ ಸಾಗಿದ್ದಾರೆಂದು ಜಾಲಹಳ್ಳಿಯ ಶಿವಾಚಾರ್ಯರತ್ನ ಶ್ರೀ ಷ.ಬ್ರ.ವಿದ್ಯಮಾನ್ಯ ಶಿವಾಭಿನವ ಜಯಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಶುಕ್ರವಾರರಂದು ತಾಲೂಕಿನ ಸುಕ್ಷೇತ್ರ ಗುಂಡಕನಾಳ ಗ್ರಾಮದ ಕಾಳೇಬೆಳಗುಂದಿ ಕಟ್ಟಿಮನಿ ಕರಡಕಲ್ ಬಿಲ್ಲಮ್ಮ ರಾಜನ ಗುರುಗಳ ವಂಶಸ್ಥರಾದ ಸ್ಥಿರಚರ ಪಟ್ಟಾಧ್ಯಕ್ಷರು ಮೂಲಸ್ಥಾನ ಬಿಲ್ಲಮಾದ್ರಿ ಗುರುಗಳ ಸಂಸ್ಥಾನ ಬ್ರಹನ್ಮಠದಲ್ಲಿ ಲಿಂಗೈಕ್ಯ ಗುರುಗಳ ಪುಣ್ಯಸ್ಮರಣೋತ್ಸವ ಹಾಗೂ ಶ್ರೀ ಷ ಬ್ರ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಮತ್ತು ಗುರುವಂದನ ಸಮಾರಂಭ ಹಾಗೂ ಜೀವನ ದರ್ಶನ ಪ್ರವಚನ ಮಂಗಲೋತ್ಸವ ಅಂಗವಾಗಿ ಏರ್ಪಡಿಸಲಾದ ಧರ್ಮಸಭೆಯಲ್ಲಿ ದಿವ್ಯ ಸಾನಿದ್ಯವಹಿಸಿಆಶೀರ್ವಚನನೀಡಿದಶ್ರೀಗಳು ಗುಂಡಕನಾಳ ಬೃಹನ್ಮಠವು ಸಮಾಜದ ಏಳಿಗೆಗಾಗಿ ಧರ್ಮದ ಉದ್ಧಾರಕ್ಕಾಗಿ ಧರ್ಮದ ಸೇವೆಯನ್ನು ಗೈಯಲು ಎರಡು ಪುತ್ರರತ್ನರನ್ನು ನೀಡಿದೆ ಇಬ್ಬರು ಪುತ್ರರು ಎರಡು ಮಠಗಳನ್ನು ಜೋಡಿತ್ತಿನ ಹಾಗೆ ಮಾಡಿಕೊಂಡು ಹೋಗುತ್ತಿರುವುದು ಈ ಮಠದ ಕೀರ್ತಿ ಬಾನೆತ್ತರಕ್ಕೆ ಇದೆ ಜನರು ಜೀವನವನ್ನು ಮನಸ್ಸಿಚ್ಚೆಯಂತೆ



ಕಳೆಯೋದಲ್ಲಾ ಸಂಸ್ಕಾರವಂತರಾಗಿ ಧರ್ಮವಂತರಾಗಿಪರೋಪಕಾರದಜೀವನ ಕಳೆಯಬೇಕು ಅಂದಾಗಿ ಜೀವನಕ್ಕೊಂದು ಬೆಲೆ ಬರಲಿದೆ ಅಲ್ಲದೇ ಉಸಿರು ನಿಂತರು ಹೆಸರು ಅಜರಾಮರವಾಗಿ ಉಳಿಯಲಿದೆ ಎಂದರು.

ಇನ್ನೋರ್ವ ಆಲಮೇಲ ಶ್ರೀ ಗುರುಸಂಸ್ಥಾನ ಹಿರೇಮಠದಶ್ರೀಚಂದ್ರಶೇಖರಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಸಮಾಜ ನಮಗೇನು ಕೊಟ್ಟಿದೆ ಎನ್ನುವದಕ್ಕಿಂತ ಸಮಾಜಕ್ಕೆ ನಮ್ಮ ಕೊಡುಗೆ ಏನು ಎಂಬುದು ಯೋಚಿಸಬೇಕು ಯಾಕೆಂದರೆ ಸಮಾಜದ ಆಸ್ತಿಯಾಗಿರುವ ಗುಂಡಕನಾಳ ಬೃಹನ್ಮಠದ ಶ್ರೀ ಗುರುಲಿಂಗ ಶಿವಾಚಾರ್ಯರು ಸದಾ ಧರ್ಮದ ಕಾರ್ಯಗಳಿಗಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದಾರೆ ಇಂತಹ ಧರ್ಮದ ಪರಂಪರೆಯ ಮಠದ ಬೆನ್ನೆಲುಬಾಗಿ ಭಕ್ತವೃಂದದವರು ನಿಲ್ಲಬೇಕು ಇದರಿಂದ ಸಮಾಜದಲ್ಲಿ ಬದಲಾವಣೆ ತರಲು ಸಾದ್ಯವಾಗಲಿದೆ ಎಂದ ಅವರು ನಿತ್ಯ ನೀವನದಲ್ಲಿ ಪರೋಪಕಾರದ ದಾನಧರ್ಮದ ಕಾರ್ಯಗಳನ್ನು ಮಾಡಿ ಸಮಾಜದಲ್ಲಿ ಆದರ್ಶಪ್ರೀಯ ಜೀವನ ನಡೆಸಬೇಕೆಂದು ಹೇಳಿದರು.

ಇನ್ನೋರ್ವ ಬ.ಬಾಗೇವಾಡಿಯ ಪಟ್ಟದ ಪದ್ಮರಾಜ ಒಡೆಯರ ಹಿರೇಮಠದ ಶ್ರೀ ಒಡೆಯರ ಶಿವಪ್ರಕಾಶ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಮನುಷ್ಯನ ಜೀವನ ಶಾಶ್ವತವಲ್ಲ ಮನುಷ್ಯ ತನ್ನ ಜೀವನದಲ್ಲಿ ನಡೆದ ಹಾದಿಯಲ್ಲಿ ದಾನ ಧರ್ಮ ಪರೋಪಕಾರದಿಂದ ಮಾಡಿರುವಂತಹ ಪುಣ್ಯದ ಕಾರ್ಯವು ಮತ್ತು ಸಂಪಾದಿಸಿ ಜನಮಾನಸ ಶಾಸ್ವತವಾಗಿ ಉಳಿದುಕೊಳ್ಳಲಿದೆ ಈಭಾಗದ ಚಿಕ್ಕಮಠವಾಗಿರುವ ಗುಂಡಕನಾಳ ಗ್ರಾಮದ ಹೆಸರನ್ನು ಬಾನೇತ್ತರಕ್ಕೆ ಬೆಳೆಸಿದ ಕೀರ್ತಿ ಈ ಗ್ರಾಮದ ಶ್ರೀ ಗುರುಲಿಂಗ ಶಿವಾಚಾರ್ಯರಿಗೆ ಸಲ್ಲುತ್ತದೆ ಸದಾ ಧರ್ಮದ ಕಾರ್ಯದ ಜೊತೆಗೆ ಸನಾತನ ಧರ್ಮ ಉಳಿವಿಗಾಗಿ ಮತ್ತು ಮಾಡುತ್ತಿರುವ ಕಾರ್ಯ ಮೆಚ್ಚುವಂತಹದ್ದಾಗಿದೆ ಧರ್ಮದ ಕಾರ್ಯದಲ್ಲಿ ಸಾದ್ಯವಾಗದನ್ನು ಸಾಧಿಸಿ ತೋರಿಸುವದರೊಂದಿಗೆ ಭಕ್ತರನ್ನು ಒಳ್ಳೆಯ ದಾರಿಯತ್ತ ಕೊಂಡೊಯುವ ಕಾರ್ಯ ಶ್ರೀಮಠವು ಮಾಡುತ್ತಿದೆ ಇದಕ್ಕೆ ಗುಂಡಕನಾಳ ಗ್ರಾಮದ ಹಾಗೂ ಸುತ್ತಮುತ್ತಲಿನಗ್ರಾಮಗಳಭಕ್ತರುಶ್ರೀಮಠದ ಮೇಲಿಟ್ಟ ಪ್ರೀತಿಯೇ ಸಾಕ್ಷಿಯಾಗಿದೆ ಪುರಾತನ ಮಠವಾಗಿರುವ ಗುಂಡಕನಾಳ ಬೃಹನ್ಮಠವನ್ನು ಜೀರ್ಣೋದ್ದಾರ ಮಾಡುವ ಸಂಕಲ್ಪವನ್ನು ಈ ಭಾಗದ ಭಕ್ತವೃಂದದವರು ವಹಿಸಿಕೊಳ್ಳಬೇಕಿದೆ ಇದರಿಂದ ಗ್ರಾಮದ ಹೆಸರು ಮತ್ತು ಕೀರ್ತಿ ಇನ್ನಷ್ಟು ಹೆಚ್ಚಿಸಲು ಸಾದ್ಯವಾಗಲಿದೆ ಎಂದರು.

ಗುಂಡಕನಾಳ ಹಿರೇಮಠದ ಶ್ರೀ ಗುರುಲಿಂಗ ಶಿವಾಚಾರ್ಯರು ಗುಂಡಕನಾಳ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಶ್ರೀಮಠದ ಮೇಲಿಟ್ಟ ಪ್ರೀತಿ ಮತ್ತು ಭಕ್ತಿ ಕುರಿತು ಕೊಂಡಾಡಿದರಲ್ಲದೇ ಶ್ರೀಮಠಕ್ಕೆ ಭಕ್ತರೇ ಆಸ್ತಿ ಎಂದು ಧರ್ಮದ ಕಾರ್ಯದಲ್ಲಿ ತೊಡಗಿಕೊಂಡಿರುವ ನನಗೆ ಭಕ್ತರ ಶ್ರೇಯಸ್ಸು ಮುಖ್ಯವಾಗಿದೆ ಪ್ರಾಚೀನ ಪರಂಪರೆ ಹೊಂದಿದ ಈ ಮಠದ ಜೀರ್ಣೋದ್ದಾರದ ಕಾರ್ಯಕ್ಕೆ ಅನೇಕ ಹಿರಿಯರು ಈಗಾಗಲೇ ಚರ್ಚಿಸಿದ್ದು ಮುಂದಿನ ದಿನಗಳಲ್ಲಿ ಶ್ರೀಮಠವನ್ನು ಜೀರ್ಣೋದ್ದಾರ ಗೊಳಿಸಲಿದ್ದಾರೆಂದು ವಿಸ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೂ ಮುಂಚೆ ಬೆಳಿಗ್ಗೆ ಬ್ರಾಹ್ಮಿ ಮೂಹೋರ್ತದಲ್ಲಿ ಲಿಂಗೈಕ್ಯ ಶ್ರೀಗಳ ಕರ್ತೃಗದ್ದುಗೆಗೆ ರುದ್ರಾಭಿಷೇಕ, ಹಾಗೂ ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ಹಾಗೂ ಜಂಗಮ ವಟುಗಳಿಗೆ ಅಯ್ಯಾಚಾರ ಕಾರ್ಯಕ್ರಮಗಳು ಜರುಗಿದವು.

ವೇದಿಕೆಯ ಮೇಲೆ ಸಗರ ಹಿರೇಮಠದ ಶ್ರೀ ಸೋಮಶೇಖರ ಶಿವಾಚಾರ್ಯರು, ಬಳವಾಟದ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಚಿಮ್ಮಲಗಿಯ ಶ್ರೀ ಸಿದ್ದರೇಣುಕ ಶಿವಾಚಾರ್ಯ ಮಹಾಸ್ವಾಮಿಗಳು, ಗುಳೇದಗುಡ್ಡದ ಶ್ರೀ ರೇವಣಸಿದ್ಧ ದೇವರು, ಕೊಡಗಾನೂರಿನ ಶ್ರೀ ಕುಮಾರ ದೇವರು, ಪ್ರವಚನಕಾರ ವೇ.ದೊಡ್ಡಬಸಯ್ಯ ಶಾಸ್ತ್ರೀಗಳು, ಮೊದಲಾದವರು ಉಪಸ್ಥಿತರಿದ್ದರು.

## ಉದ್ಯೋಗ ಮತ್ತು ತರಬೇತಿ ಒಡಂಬಡಿಕೆ




**ವಿಜಯಪುರ :** ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ಮತ್ತು ಬೆಂಗಳೂರಿನ ಟೊಯೊಟಾ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಪ್ರೈ.ಲಿ ನಡುವೆ ಉದ್ಯೋಗ ಮತ್ತು ತರಬೇತಿಯ ಒಡಂಬಡಿಕೆ ಸಹಿ ಹಾಕಲಾಯಿತು.

ಗುರುವಾರ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ನಲ್ಲಿ ಮಾಡಿಕೊಂಡ ಟೊಯೊಟಾ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಪ್ರೈ.ಲಿ ಅಧ್ಯಕ್ಷ ಅಮಿತ ಜೈನ್ ಮತ್ತು ಬಿ.ಎಲ್.ಡಿ.ಇ ಸಂಸ್ಥೆ ಆಡಳಿತಾಧಿಕಾರಿ ವಿಲಾಸ ಬಗಲಿ, ಕಾಲೇಜು ಪ್ರಾಚಾರ್ಯ ಪಿ. ಬಿ. ಕಳಸಗೊಂಡ ಒಡಂಬಡಿಕೆಗೆ ಸಹಿ ಹಾಕಿದರು. ಈ ಸಂದರ್ಭದಲ್ಲಿ ವ್ಯವಸ್ಥಾಪಕ ಶ್ರೀಧರ ಹೆಚ್. ಎಸ್. ಮತ್ತು ಹಿರಿಯ ಅಧಿಕಾರಿ ಪ್ರವೀಣ ಕುಮಾರ ಇದ್ದರು.

ಒಡಂಬಡಿಕೆಗೆ ಸಹಿಯಾದ ನಂತರ ಮಾತನಾಡಿದ ಅಮಿತ ಜೈನ್ ಅವರು, ಟೊಯೋಟಾ ಕಂಪನಿಯು ಉದ್ಯೋಗಿಗಳಿಗೆ ಉತ್ತಮ ವೇತನದ ಜೊತೆಗೆ ಕೌಶಲ್ಯ ಅಭಿವೃದ್ಧಿಯಂತಹ ಸೌಲಭ್ಯಗಳನ್ನು ಒದಗಿಸುವ ಮೂಲಕಉನ್ನತಮಟ್ಟಕ್ಕೆಬೆಳೆದಿದೆಎಂದುಹೇಳಿದರು. ಈ ಒಡಂಬಡಿಕೆಯಿಂದ ಸಿಬ್ಬಂದಿಗಳಿಗೆ ತರಬೇತಿ ನೀಡುವುದು, ಚರ್ಚೆ ಹಾಗೂ ಸತತ ಸಂಪರ್ಕ ಹೊಂದುವ ಮೂಲಕ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿತರಬೇತಿಪಡೆಯಲುಅನುಕೂಲವಾಗಲಿದೆ. ಅಲ್ಲದೇ,ಉದ್ಯೋಗಕ್ಷೇತ್ರದಲ್ಲಿಬರುವಸವಾಲುಗಳನ್ನು ಎದುರಿಸಲು ಹಾಗೂ ಉದ್ಯೋಗ ಸೌಲಭ್ಯಗಳನ್ನು ಒದಗಿಸಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪನ್ಯಾಸಕಿ ಶಿಲ್ಪಾ ಜಗದಾಳೆ ಸ್ವಾಗತಿಸಿದರು. ಶ್ರೇಯಾ ಪಾಟೀಲ್ ವಂದಿಸಿದರು.

## ಪ.ಪಂ ಅಧ್ಯಕ್ಷ, ಉಪಾಧ್ಯಕ್ಷರ ಅಧಿಕಾರ ಸ್ವೀಕಾರ

**ಕೊಲ್ಹಾರ :** ಪಟ್ಟಣ ಪಂಚಾಯಿತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಚನ್ನಮಲ್ಲಪ್ಪ ಗಿಡ್ಡಪ್ಪಗೋಳ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದ ರಾಜಮಾ ನದಾಫ್ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಒಟ್ಟು 17 ಸದಸ್ಯರನ್ನು ಹೊಂದಿರುವ ಕೊಲ್ಹಾರ ಪಟ್ಟಣ ಪಂಚಾಯಿತಿಯಲ್ಲಿ ಸರ್ವ ಸದಸ್ಯರು ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಿದ್ದರು.



ಈ ಸಂದರ್ಭದಲ್ಲಿ ಅಧ್ಯಕ್ಷ ಚನಮಲ್ಲಪ್ಪ ಗಿಡ್ಡಪ್ಪಗೋಳ ಮಾತನಾಡಿ ಸರ್ವ ಸದಸ್ಯರನ್ನ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವುದರ ಜೊತೆಗೆ ಪಟ್ಟಣದ ಅಭಿವೃದ್ಧಿಗಾಗಿ ಶ್ರಮಿಸುತ್ತೇನೆ ಎಂದರು.

ಅಧಿಕಾರ ಸ್ವೀಕಾರ ಪ್ರಕ್ರಿಯೆ ತದನಂತರದಲ್ಲಿಪ್ರಥಮಸಾಮಾನ್ಯ ಸಭೆ ಜರುಗಿತು, ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯ ಬಾಬು ಬಜಂತ್ರಿ ಮಾತನಾಡಿ ನೂತನ ಅಧ್ಯಕ್ಷ, ಉಪಾಧ್ಯಕ್ಷರು ಸರ್ವ ಸದಸ್ಯರನ್ನು ಸಮಾನವಾಗಿ ಕಾಣುವ ಮೂಲಕ ಮುನ್ನಡೆಯುತ್ತಿರಿ ಎನ್ನುವ ನಂಬಿಕೆಯಿದೆ ಎಂದರು.

ಇನ್ನೋರ್ವ ಸದಸ್ಯ ತೌಶಿಪ ಗಿರಗಾಂವಿ ಮಾತನಾಡಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯಾಗುವ ಮೂಲಕ ಆಡಳಿತಕ್ಕೆ ಚುರುಕು ದೊರಕಿದೆ. ಸರ್ವರು ಒಂದಾಗಿ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ ಎಸ್ಎಸ್‌ನಾಯಕಲಮಠ,ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಉಮೇಶ ಚಲವಾದಿ ಸಹಿತ ಸರ್ವ ಸದಸ್ಯರು, ಪಟ್ಟಣದ ಪ್ರಮುಖರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಮ್ಮೇಳನ ಸರ್ವಾಧ್ಯಕ್ಷರಿಗೆ ಆತ್ಮೀಯ ಆಹ್ವಾನ



**ವಿಜಯಪುರ :** 20ನೇ ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಇಂಗಳೇಶ್ವರ ವಿರಕ್ತಮಠದ ಹಿರಿಯ ಪೂಜ್ಯರಾದ ಪೂಜ್ಯ ಶ್ರೀ ಚನ್ನಬಸವ ಸ್ವಾಮೀಜಿ ಅವರನ್ನು ಜಿಲ್ಲಾ ಹಾಗೂ ಬಸವನ ಬಾಗೇವಾಡಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಆಮಂತ್ರಿಸಿ ಗೌರವಿಸಿದರು.

ಜಿಲ್ಲಾ ಕಸಾಪ ಗೌರವ ಸಲಹೆಗಾರ ಡಾ. ವ್ಹಿ.ಡಿ ಐಹೊಳ್ಳಿ ಅವರು ಮಾತನಾಡಿ, ಬಹುಕಾಲದವರೆಗೆ ವಚನ ಸಾಹಿತ್ಯದ ಸೇವೆ ಮಾಡುತ್ತ ಅಪರೂಪದ ವಚನ ಶಿಲಾ ಮಂಟಪವನ್ನು ಸ್ಥಾಪಿಸಿ ನಾಡಿನ ಘನತೆ, ಗೌರವವನ್ನು ಹೆಚ್ಚಿಸಿದ ಶ್ರೀಗಳು ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಜಿಲ್ಲೆಯ ಎಲ್ಲ ಶ್ರೀಗಳಿಗೂ ಹಾಗೂ ಸಾಹಿತಿಗಳಿಗೂ, ವಿಶೇಷವಾಗಿ ಅನೇಕ ಕನ್ನಡಪರ ಸಂಘಟನೆಗಳಿಗೂ ಅತೀವ ಸಂತೋಷವನ್ನುಂಟು ಮಾಡಿದೆ ಎಂದರು.

ಬಸವನ ಬಾಗೇವಾಡಿ ತಾಲೂಕಿನ ಹಿರಿಯ ಸಾಹಿತಿ ವಿವೇಕಾನಂದ ಕಲ್ಯಾಣಶೆಟ್ಟಿ ಮಾತನಾಡಿ, ಶ್ರೀಗಳು ಕನ್ನಡದ ಅಭಿಮಾನಿಗಳು ವಚನ ಶಿಲಾ ಮಂಟಪವನ್ನು ಸ್ಥಾಪನೆ ಮಾಡಿ ಬಸವ ನಾಡಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಅಪಾರವಾಗಿದ್ದು, ಅದನ್ನು ಉಳಿಸಿದ, ಬೆಳೆಸಿದ ಕೀರ್ತಿ ಇಂಗಳೇಶ್ವರ ವಿರಕ್ತಮಠಕ್ಕೆ ಸಲ್ಲುತ್ತದೆ ಎಂದರು.

ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ಅಭಿಷೇಕ ಚಕ್ರವರ್ತಿ, ಡಾ. ಮಾಧವ ಗುಡಿ, ಸುರೇಶ ಜತ್ತಿ, ಜಯಶ್ರೀ ಹಿರೇಮಠ, ಶಿವಾನಂದ ಡೋಣೂರ, ಬಸವರಾಜ ಮೇಟಿ, ಶಿವಪುತ್ರ ಅಂಕದ, ಅರವಿಂದ ಕುಲಕರ್ಣಿ, ಕುಮಾರಗೌಡ ಪಾಟೀಲ, ರಾಹುಲ್ ಜಾಧವ ಮುಂತಾದವರು ಉಪಸ್ಥಿತರಿದ್ದರು.

# ತ್ರಿಪದಿ ಮೂಲಕ ಜನಮಾನಸದಲ್ಲಿ ನೆಲೆನಿಂತ ಕವಿ ಸರ್ವಜ್ಞ: ಸೋಮಲಿಂಗ ಗೆಣ್ಣೂರ

**ವಿಜಯಪುರ :** ನೇರ-ನಿಷ್ಠುರ, ಆದರ್ಶ ವಿಚಾರಗಳನ್ನು ಹಾಗೂ ಸತ್ಯ ನುಡಿಗಳನ್ನು ತ್ರಿಪದಿಗಳ ಮೂಲಕ ಸಾರಿ, ಜನಮಾನಸದಲ್ಲಿ ನೆಲೆನಿಂತ ಕವಿ ಸರ್ವಜ್ಞ ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹೇಳಿದರು.

ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಗುರುವಾರ ನಡೆದ ಸಂತ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಂಡದನ್ನು, ಅನುಭವಿಸಿದನ್ನು ಕೇವಲ ಮೂರು ಸಾಲುಗಳಲ್ಲಿ ಸರಳ ಹಾಗೂ ಸುಂದರವಾಗಿ ಒಳಿತು ಕೆಡಕುಗಳ ಸಂದೇಶವನ್ನು ತ್ರಿಪದಿಗಳಲ್ಲಿ ಸರ್ವಜ್ಞರು ಈ ಲೋಕಕ್ಕೆ ಸಾರಿದರು.

ಸಕಲ ಸಂಪತ್ತಿನಲ್ಲಿ ವಿದ್ಯೆಯೇ ಶ್ರೇಷ್ಠ ಸಂಪತ್ತು. ವಿದ್ಯೆ ಎಂಬ ಸಂಪತ್ತನ್ನು ದಾರ್ಶನಿಕರ, ವಚನಕಾರರ ಸಾರ ಇಂದಿನ ಯುವಜನಾಂಗ ಅರಿತುಕೊಳ್ಳಬೇಕು. ಇಂತಹ ಸತ್ಪುರುಷರು ಸಾರಿದ ಸಂದೇಶ ಅವರ ನುಡಿಗಳನ್ನು ಮಕ್ಕಳಿಗೆ ತಿಳಿಸಿಕೊಡುವ ಮೂಲಕ ಮಕ್ಕಳ ಭವಿಷ್ಯ ಉಜ್ವಲಗೊಳಿಸಬಹುದು ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಸರ್ವಜ್ಞ ತಮ್ಮ ತ್ರಿಪದಿಗಳ ಮೂಲಕ ಅತ್ಯಂತ ಸರಳವಾಗಿ ಜನರಾಡುವ ಭಾಷೆಯಲ್ಲಿ ಕಟ್ಟಿಕೊಟ್ಟು ಜನಮಾನಸದಲ್ಲಿ ಮನೆ-ಮನಗಳಲ್ಲಿ ಜನಜನಿತರಾಗಿದ್ದಾರೆ.



ತ್ರಿಪದಿಗಳಲ್ಲಿ ತತ್ವಾದರ್ಶದ ಕಾಣಬಹುದಾಗಿದ್ದು, ಅವರ ವಚನಗಳ ಸಾರವನ್ನು ಅರಿತುಕೊಂಡು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ. ಸರ್ವಜ್ಞರು ಕೃಷಿ, ಕುಟುಂಬ, ಸಮಾಜದಲ್ಲಿನ ಜ್ವಲಂತ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತಾ, ಮೂರೇ ಸಾಲಿನಲ್ಲಿ ಸಂದೇಶ ಕೊಡುವ ತ್ರಿಪದಿಗಳನ್ನು ರಚಿಸಿ ಈ ನಾಡಿಗೆ ಮಹತ್ವಪೂರ್ಣವಾದ ಕೊಡುಗೆ ಕೊಟ್ಟಿದ್ದಾರೆ. ತ್ರಿಪದಿಗಳು ಸರಳತೆ ಮತ್ತು ಪ್ರಾಸಬದ್ಧತೆಯಿಂದ ಜನಪ್ರಿಯವಾಗಿವೆ. ಸರ್ವರೊಳಗೊಂದು ನುಡಿಯ ಕಲಿತು ವಿದ್ಯೆಯ ಪರ್ವತವೇ ಆದವರು ಸರ್ವಜ್ಞ ಎಂದು ಅವರು ಹೇಳಿದರು.

ಉಪನ್ಯಾಸ ನೀಡಿದ ಉಪನ್ಯಾಸಕ ಪೂಜಾ ಕೆ.ಎಸ್ ಅವರು, ಸರ್ವಜ್ಞರ ತ್ರಿಪದಿಗಳು ಕೇವಲ ಒಂದೇ ಕ್ಷೇತ್ರಕ್ಕೆ ಸಿಮೀತವಾಗಿರದೇ ಸಮಾಜದ ಎಲ್ಲ ಬಗೆಯ ತೊಡಕುಗಳನ್ನು ದಿನ ಬಳಕೆ ನುಡಿಗಳ ಮೂಲಕ ಜನರಿಗೆ ತಿಳಿಸಿದ್ದಾರೆ. ಮೌಢ್ಯತೆಯ ತೊರೆದು, ಕಾಯಕ ಚಿತ್ತರಾಗಿ ಕರ್ಮ ಮಾಡಲು ಸರ್ವಜ್ಞ ತ್ರಿಪದಿಯ ಮೂಲಕ ತಿಳಿಸಿದ್ದಾರೆ. ಮಾತಿನಿಂದಾಗುವ ಕೆಡಕುಗಳ ಸಂದೇಶವನ್ನು ಸಂತ ಕವಿ ಸರ್ವಜ್ಞರು ಜಗಕ್ಕೆ ಸಾರಿದ ಅವರು, ವಿಜ್ಞಾನ, ತಂತ್ರಜ್ಞಾನದ ಯುಗದಲ್ಲೂ ಕೃಷಿಯ ಬಗ್ಗೆ ಸರ್ವಜ್ಞರ ತ್ರಿಪದಿಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

**ಮೆರವಣಿಗೆಗೆ ಚಾಲನೆ:**

ಸಂತ ಕವಿ ಸರ್ವಜ್ಞರ ಭಾವಚಿತ್ರದ ಮೆರವಣಿಗೆಗೆ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹಾಗೂ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ ಅವರು ನಗರದ ಶ್ರೀ ಸಿದ್ದೇಶ್ವರ ದೇಸ್ಥಾನದ ಆವರಣದಲ್ಲಿ ಚಾಲನೆ ನೀಡಿದರು. ಮೆರವಣಿಗೆಯು ಗಾಂಧಿ ವೃತ್ತ, ಅಂಬೇಡ್ಕರ್ ವೃತ್ತ, ಕನಕದಾಸ ವೃತ್ತ ಮಾರ್ಗವಾಗಿ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿಕ್ಕೆ ತಲುಪಿ ಸಮಾವೇಶಗೊಂಡಿತು. ಈ ಸಂದರ್ಭದಲ್ಲಿ ಎಸ್.ಪಿ.ಕುಂಬಾರ, ದೇವೇಂದ್ರ ಮೀರೆಕರ, ಗಿರೀಶ್ ಕುಲಕರ್ಣಿ, ಭೀಮರಾಯ ಜಿಗಜಿಣಗಿ ಇತರರು ಇದ್ದರು.

ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ ಹಾಗೂ ನಿವೃತ್ತ ಡಿವೈಎಸ್‌ಪಿ ಸೋಮಲಿಂಗ ಕುಂಬಾರ ಮಾತನಾಡಿದರು. ವಿಜಯಪುರ ತಹಶೀಲ್ದಾರ ಪ್ರಶಾಂತ ಚನಗೊಂಡ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಎ.ಬಿ.ಅಲ್ಲಾಪುರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಮಹಾನಗರ ಪಾಲಿಕೆಯ ಉಪ ಆಯುಕ್ತ ನಾರಾಯಣಕರ, ಸದಾನಂದ ಕುಂಬಾರ, ಅರವಿಂದ ಕುಂಬಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸರ್ವಜ್ಞ ವಿದ್ಯಾಪೀಠದಲ್ಲಿ ಮಹಾಕವಿ ಸರ್ವಜ್ಞನವರ ಜಯಂತಿ ಆಚರಣೆ




**ತಾಳಿಕೋಟೆ :** ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಗುರುವಾರದಂದು ತ್ರಿಪದಿಗಳ ಆಶುಕವಿ ಜ್ಞಾನಿ ಸರ್ವಜ್ಞ ಜಯಂತ್ಯೋತ್ಸವವನ್ನು ಆಚರಿಸಲಾಯಿತು.

ಈ ಸಮಯದಲ್ಲಿ ಸರ್ವಜ್ಞ ವಿದ್ಯಾಪೀಠ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಬ ಮಂಗಳೂರ ರವರು ಮಾತನಾಡಿ 16ನೇ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದ ಕವಿ ಸರ್ವಜ್ಞ ಸರ್ವಜ್ಞ ಎಂದರೆ ಸಂಸ್ಕೃತ ಭಾಷೆಯಲ್ಲಿ ಎಲ್ಲವನ್ನು ತಿಳಿದವ ಎಂದು ಅರ್ಥೈಸಲಾಗಿದೆ ಇವರನ್ನು ತ್ರಿಪದಿಯ ಸಾಹಿತ್ಯದ ಬ್ರಹ್ಮ ಎಂದು ಕರೆಯಲಾಗಿದೆ ತ್ರಿಪದಿಗಳೆಂದರೆ ಮೂರು ಸಾಲಿನ ವಚನ ಎಂಬುದಾಗಿದೆ ಪುಷ್ಪದತ್ತ ಸರ್ವಜ್ಞನ ನಿಜವಾದ ನಾಮವಾಗಿದ್ದು. ಸರ್ವಜ್ಞ ಎಂಬುದು ಇವರ ಕಾವ್ಯನಾಮವಾಗಿದೆ ಎಂದರು.

ಮಹಾಕವಿ ಸರ್ವಜ್ಞನವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ಸಂತೋಷ ಪವಾರ ಶಿಕ್ಷಕರಾದ ರಾಜು ಜವಳಗೇರಿ, ದೈಹಿಕ ಶಿಕ್ಷಕರಾದ ಬಸವರಾಜ ಚಳ್ಳಗಿ, ಶಾಂತಗೌಡ ಬಿರಾದಾರ, ಭೀಮನಗೌಡ ಸಾಸನೂರ, ರಸೂಲಸಾ ತುರ್ಕನಗೇರಿ, ರವಿಕುಮಾರ ಮಲ್ಲಾಬಾದಿ, ಬಸವರಾಜ ಸವದತ್ತಿ ,ಮೌಲಾಲಿ ವಾಲಿಕಾರ, ಸಿದ್ದನಗೌಡ ಮೂದನೂರು, ಶರಣಗೌಡ ಕಾಚಾಪುರ, ರಮೇಶ ಪಾಸೋಡಿ, ರೂಪಾ ಪಾಟೀಲ, ಶಿವಲೀಲಾ ಚುಂಚನೂರ, ದೇವಿಂದ್ರ ಗುಳೆದ, ಅನಿತಾ ಚೌದ್ರಿ, ಅಂಬುಜಾ ಹಜೇರಿ, ಶಿವಕುಮಾರ ಕುಂಬಾರ, ರಾಜಬಿ ಬಿದರಿ, ಕಲ್ಪನಾ ಹಜೇರಿ, ನಾಗರತ್ನ ಮೈಲೇಶ್ವರ, ಹೇಮಾ ಕೊಡೆಕಲ್, ನಾಗಶ್ರೀ ನಾಯಕ, ಮೇಘಾ ಪಾಟೀಲ, ಮುಬಿನ ಮುರಾಳ, ತನುಶ್ರೀ ಮಹೇಂದ್ರಕರ, ಶಂಕ್ರಮ್ಮ, ಮುಬಾರಕ ಬನಹಟ್ಟಿ ಹಾಗೂ ಗುರು ಬಳಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾಹಿತ್ಯ, ಸಂಗೀತ, ಕಲೆ ವ್ಯಕ್ತಿಯ ಜೀವನದ ಸಂಗಾತಿಗಳು: ಡಾ. ವೇದನಿಧಿ ಆಚಾರ್ಯ

**ವಿಜಯಪುರ :** ಆಧುನಿಕತೆಯಲ್ಲಿ ಮುಳುಗಿದ ಮನುಷ್ಯ ಕೌಟುಂಬಿಕ ಸಂಬಂಧಗಳಿಂದ ದೂರ ಉಳಿಯುತ್ತಿದ್ದಾನೆ. ವಿಭಕ್ತ ಕುಟುಂಬದಿಂದ ಮಾನವೀಯ ಮೌಲ್ಯಗಳು ಮರೆಯುತ್ತಿವೆ. ಸಂಸ್ಕೃತಿ, ಸಂಪ್ರದಾಯಗಳಿಂದ ಯುವಕ-ಯುವತಿಯರು ವಿಮುಖರಾಗುತ್ತಿದ್ದಾರೆ. ಮಾನಸಿಕ ದುಗುಡ ದುಮ್ಮಾನಗಳಿಂದ ಹೊರ ಬರಬೇಕಾದರೆ ಸಂಗೀತ, ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳಲ್ಲಿ ತೊಡಗಿಕೊಳ್ಳಬೇಕು. ಉತ್ತಮ ಸಂಗೀತ, ಸಾಹಿತ್ಯ ಮತ್ತು ಕಲೆಗಳು ಮನುಷ್ಯನ ನೆಮ್ಮದಿಯ ಜೀವನದ ಸಂಗಾತಿಗಳು ಎಂದು ದರಬಾರ ಕಾಲೇಜಿನ ಉಪನ್ಯಾಸಕ ಹಾಗೂ ಪಂಡಿತ ಡಾ. ವೇದನಿಧಿ ಆಚಾರ್ಯ ಹೇಳಿದರು.

ನಗರದ ಕರ್ನಾಟಕ ಕಲಾ ಸಂಘವು, ಬಿಡಿಈ ಬಾಲಕಿಯರ ಪ.ಪೂ. ಕಾಲೇಜಿನಲ್ಲಿ ಹಮ್ಮಿಕೊಂಡ ಸಾಧಕರ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಶಿಕ್ಷಣ ಅಂಕಗಳಿಗೆ ಸೀಮಿತವಾಗಿದೆ. ಇಂದು ವಿದ್ಯೆಗೆ ಕೊರತೆಯಿಲ್ಲ. ಆದರೆ ಕೌಟುಂಬಿಕ ಬೆಲೆ ಅರಿತುಕೊಳ್ಳುತ್ತಿಲ್ಲ. ಪರಸ್ಪರ ಪ್ರೀತಿ, ಸಹೋದರತೆ ಭಾವ ಮೂಡಿದಾಗ ಮಾತ್ರ ಶಿಕ್ಷಣಕ್ಕೆ ಬೆಲೆ ಸಿಗುತ್ತದೆ ಎಂದರು.

ಡಯಟ್ ಉಪನ್ಯಾಸಕ ನಾರಾಯಣ ಬಾಬಾನಗರ ಮುಖ್ಯ ಅತಿಥಿಗಳಾಗಿ ಮಾತನಾಡಿ, ಕಳೆದ 30 ವರ್ಷಗಳಿಂದ ಯಾವುದೇ ಫಲಾಪೇಕ್ಷೆಯಿಲ್ಲದೆ ಸಮಾಜಮುಖಿ ಕೆಲಸ ಮಾಡುತ್ತಿರುವ ಕರ್ನಾಟಕ ಕಲಾ ಸಂಘದ ಕಾರ್ಯ ಶ್ಲಾಘನೀಯವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಪ್ರಾಮಾಣಿಕ ಸೇವೆ ಮಾಡಿದ ವ್ಯಕ್ತಿಗಳನ್ನು ಗೌರವಿಸುತ್ತ ಬಂದಿದೆ. ಸಾಹಿತ್ಯ, ಕಲೆ, ಗಮಕ ಕ್ಷೇತ್ರದ ಅನೇಕ ದಿಗ್ಗಜರನ್ನು ವಿಜಯಪುರಕ್ಕೆ ಪರಿಚಯಿಸಿದ ಶ್ರೇಯಸ್ಸು ಕರ್ನಾಟಕ ಕಲಾ ಸಂಘಕ್ಕಿದೆ. ಭಾರತೀಯ ಪರಂಪರೆಯನ್ನು ಪರಿಚಯಿಸಿ ಬೆಳೆಸುತ್ತಿರುವ ಈ ಸಂಘ ನೂರು ಕಾಲ ಸಮಾಜಸೇವೆ ಮಾಡುವಂತಾಗಲಿ ಎಂದು ಹಾರೈಸಿದರು.



ರಾಜ್ಯ ಸರಕಾರದ ಕುಮಾರವ್ಯಾಸ ಪ್ರಶಸ್ತಿ ಪುರಸ್ಕೃತ ಹಿರಿಯ ಗಮಕ ಗಾಯಕಿ ಹಾಗೂ ಹಿಂದೂಸ್ಥಾನಿ ಗಾಯಕಿ ಶಾಂತಾಬಾಯಿ ಕೌತಾಳ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯ ರಾಜಶೇಖರ ಕಲ್ಮಠ, ಶ್ರೀತನಯ ಕಾವ್ಯನಾಮದ ಬಳವಂತರಾಯ ಕುಲಕರ್ಣಿ ಕಾರ್ಯಕ್ರಮ ಕುರಿತು ಮಾತನಾಡಿದರು.

ವಾಗ್ದೇವಿ ಗಮಕ ಕಲಾ ಪ್ರಶಸ್ತಿಗೆ ಭಾಜನರಾದ ಹಿರಿಯ ಗಮಕ ವ್ಯಾಖ್ಯಾನಕಾರ ಕಲ್ಯಾಣರಾವ ದೇಶಪಾಂಡೆ ಅವರನ್ನು ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಡಾ. ಸುಭಾಸಚಂದ್ರ ಕನ್ನೂರ ಅವರನ್ನು ಕರ್ನಾಟಕ ಕಲಾ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಕುಮಾರಿ ರಕ್ಷಿತ ದೀಕ್ಷಿತ ಹಾಗೂ ರಾಧಿಕಾ ದೀಕ್ಷಿತ ಭಕ್ತಿಗೀತೆಗಳಿಗೆ ನೃತ್ಯ ಮಾಡಿದರು.

ಸಂಘದ ಸದಸ್ಯ ವಸಂತರಾವ ಕೊರ್ತಿ ಪ್ರಾರ್ಥಿಸಿದರು. ಸಂಘದ ಅಧ್ಯಕ್ಷ ಬಾಬುರಾವ ಕುಲಕರ್ಣಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸದಸ್ಯ ಪ್ರಕಾಶ ಇನಾಮದಾರ ಪರಿಚಯಿಸಿದರು. ಪ್ರೊ. ರಾಮಚಂದ್ರ ದೀಕ್ಷಿತ ನಿರೂಪಿಸಿದರು. ಬಿ.ಎಸ್. ಕಳ್ಳಿಮಠ ವಂದಿಸಿದರು.

ಕಾರ್ಯಕ್ರಮದಲ್ಲಿ ಸುಧೀಂದ್ರ ಜಕಾತಿ, ಚಂದ್ರಿಕಾ ಇನಾಮದಾರ, ಶ್ರೀದೇವಿ ಕುಲಕರ್ಣಿ, ಭಾಗೀರಥಿ ಕರಜಗಿ, ಡಿ.ವಿ. ಕುಲಕರ್ಣಿ, ಎಸ್.ಎಲ್. ಕುಲಕರ್ಣಿ, ಯಲಗೂರೇಶ ಕುಲಕರ್ಣಿ, ಗಾಯತ್ರಿ ದೀಕ್ಷಿತ, ನೀಲಾಬಾಯಿ ದೀಕ್ಷಿತ, ಸೌರಭ ನ್ಯಾಮಣ್ಣವರ, ಗಿರೀಶ ಕುಲಕರ್ಣಿ, ಶಂಕರ ದಡ್ಡಿ, ಪ್ರೊ. ಜಿ.ಎನ್. ದೇಶಪಾಂಡೆ, ಎಂ.ಪಿ. ಕುಲಕರ್ಣಿ, ಮಯೂರ ತಿಳಗುಳಕರ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

## ಆರೋಗ್ಯಕ್ಕಾಗಿ ಸಾವಯವ ಕೃಷಿ ಗೋಷ್ಠಿ

# ಸಾವಯವ ರೈತನಿಗೆ ಮತ್ತು ಉತ್ಪನ್ನಗಳಿಗೆ ಬೆಲೆ ಸಿಗಬೇಕು: ಕಾಡಸಿದ್ದೇಶ್ವರ ಶ್ರೀ

**ಮಹಾಲಿಂಗಪುರ :** ಸಾವಯವ ಬೆಳೆ ಬೆಳೆಯುವ ರೈತನಿಗೆ ಮತ್ತು ಆತನ ಉತ್ಪನ್ನಗಳಿಗೆ ಬೆಲೆ ಸಿಗಬೇಕು ಎಂದು ಕೊಲ್ಹಾಪುರ ಕಣೇರಿಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಜಿ ಹೇಳಿದರು.

ಸ್ಥಳೀಯ ಕೆಎಲ್‌ಇ ಕಾಲೇಜಿನ ಮೈದಾನದಲ್ಲಿ ಮಾಧವಾನಂದ ವಿವಿದೋದ್ದೇಶಗಳ ಸಹಕಾರ ಸಂಘ, ರನ್ನ ಸಾವಯವ ಕೃಷಿ ಪರಿವಾರ ಹಾಗೂ ಕೆಎಲ್‌ಇ ಪದವಿ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಡೆದ ಆರೋಗ್ಯಕ್ಕಾಗಿ ಸಾವಯವ ಕೃಷಿ ಗೋಷ್ಠಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೈತರು ರಾಸಾಯನಿಕ ಜಾಲದಿಂದ ಹೊರಬಂದು ಸಾವಯವ ಕೃಷಿಯತ್ತ ಮುಖ ಮಾಡಬೇಕು. ಅನ್ನದಾತನಾದವನು ಜನರಿಗೆ ವಿಷಮುಕ್ತ ಅನ್ನ ನೀಡಬೇಕು ಎಂದರು.

ಕೋಚೂರು ಸವಿತಾಪೀಠದ ಸವಿತಾನಂದ ಸ್ವಾಮೀಜಿ ಮಾತನಾಡಿ, ದೇಸಿ ಹಸುವಿನೊಂದಿಗೆ ಸಾವಯವ ಪದ್ಧತಿಯಲ್ಲಿ ಕೃಷಿ ಮಾಡಿದರೆ ಅತಿ ಹೆಚ್ಚು ಪ್ರತಿಫಲ ಭೂಮಿಯಿಂದಲೇ ಪಡೆಯಬಹುದು ಎಂದರು.



ರಾಜ್ಯೋತ್ಸವ ಪ್ರಶಸ್ತಿ ವಿಜೇತ ಹುಲಕೇರಿ ಸಜ್ಜನ ಮಾತನಾಡಿ, ರೈತರು ಪಂಚಮಹಾಭೂತಗಳನ್ನು ಗೌರವಿಸಿ ಬೆಳೆ ಬೆಳೆಯಬೇಕು. ಜೀವ ವೈವಿಧ್ಯತೆಯಿಂದ ಮಾಡಿದ ಕೃಷಿಗೆ ವೆಚ್ಚ ಕಡಿಮೆ ಎಂದರು. ಪುರುಷೋತ್ತಮರಾಯರ ಪ್ರಶಸ್ತಿ ವಿಜೇತ ರೈತ ಎಸ್. ಟಿ. ಪಾಟೀಲ ಮಾತನಾಡಿ, ಜನರು ರೈತರ ಸಾವಯವ ಉತ್ಪನ್ನಗಳನ್ನು ಚೌಕಾಶಿ ಮಾಡದೇ ಖರೀದಿಸಿರಿ ಎನ್ನುತ್ತ ಮಣ್ಣು ಉಳಿಸಿ ಎಂಬ ಹಾಡು ಹಾಡಿ ಜಾಗೃತಿ ಮೂಡಿಸಿದರು.

ಶಿರೋಳ ರಾಮಾರೂಢ ಮಠದ ಶ್ರೀ ಶಂಕರಾರೂಢ ಸ್ವಾಮೀಜಿ ಮಾತನಾಡಿ, ರೋಗಮುಕ್ತ ಜೀವನಕ್ಕೆ ರಾಸಾಯನಿಕ ಮುಕ್ತ ಕೃಷಿ ಉತ್ಪನ್ನಗಳನ್ನು ಬಳಸಬೇಕು ಎಂದರು. ಇಪ್ಪತ್ತೈದು ವರ್ಷಗಳಿಂದ ಸಾವಯವ ಪರಿವಾರವನ್ನು ಕ್ರಾಂತಿಕಾರಿಯಾಗಿ ಬೆಳೆಸುತ್ತಿರುವ ಆರ್. ಟಿ. ಪಾಟೀಲ ಅವರ ಕಳಕಳಿಯನ್ನು ಕೊಂಡಾಡಿದರು. ಸಾವಯವ ಕೃಷಿಕ ಲಕ್ಷ್ಮಣ ಬಿಳ್ಳೂರ, ಸಂಘದ ಅಧ್ಯಕ್ಷ ಅಪ್ಪಣ್ಣಗೌಡ ಪಾಟೀಲ, ಉಪಾಧ್ಯಕ್ಷ ಹೊಳೆಬಸಪ್ಪ ದಂಡಿನ ಹಾಗೂ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

**ಸಾವಯವ ಕೃಷಿ ಉತ್ಪನ್ನ ಮಳಿಗೆ ಉದ್ಘಾಟನೆ:** ಇದಕ್ಕೂ ಮುನ್ನ ವಿದ್ಯಾನಗರದ ರನ್ನ ಬೆಳಗಲಿ ರಸ್ತೆಯಲ್ಲಿ ಸಾವಯವ ಕೃಷಿ ಉತ್ಪನ್ನಗಳ ನೂತನ ಮಳಿಗೆಗೆ ಶ್ರೀಗಳು ಚಾಲನೆ ನೀಡಿದರು. ದೇಶಿ ಆಕಳನ್ನು ಪೂಜಿಸಿ ಅಂಗಡಿಯಲ್ಲಿ ಪಾದಾರ್ಪಣೆ ಮಾಡಿಸುವ ಮೂಲಕ ಶಾಸ್ತ್ರೋಕ್ತವಾಗಿ ಉದ್ಘಾಟಿಸಲಾಯಿತು. ಗ್ರಾಹಕರಿಗೆ ನೇತ್ರಬಿಂದು ಎಂಬ ಕಣ್ಣಿನ ಔಷಧಿಯ ಹನಿ ಹಾಕಲಾಯಿತು. ರೈತರಿಗೆ ಕಾರ್ಬನ್ ಉತ್ಪಾದನೆಗೆ ಸಹಕಾರಿಯಾಗುವ ಸಸ್ಯ ಸಂಜೀವಿನಿ ಎಂಬ ಆರ್ಗ್ಯಾನಿಕ್ ದ್ರವ ನೀಡಲಾಯಿತು.

# ಶಿವಸಿಂಪಿ ಜಿಲ್ಲಾ ಸಮಾವೇಶದ ಪರಿಕರ ಬಿಡುಗಡೆ



**ರಬಕವಿ-ಬನಹಟ್ಟಿ:** ಮಾರ್ಚ 9ರಂದು ಬಾದಾಮಿಯಲ್ಲಿ ಜರುಗಲಿರುವ ಬಾಗಲಕೋಟೆ ಜಿಲ್ಲಾ ಶಿವಸಿಂಪಿ ಸಮಾವೇಶ-2025 ಹಾಗು ಶಿವದಾಸಿಮಯ್ಯನವರ ಜಯಂತ್ಯೋತ್ಸವ ನಿಮಿತ್ಯ ಬನಹಟ್ಟಿಯಲ್ಲಿ ಪರಿಕರಗಳ ಬಿಡುಗಡೆ ಸಮಾರಂಭ ಜರುಗಿತು.

ಈ ಸಂದರ್ಭದಲ್ಲಿ ಬಾದಾಮಿ ತಾಲೂಕಾಧ್ಯಕ್ಷ ನಾಗಪ್ಪ ಶಿವಣಗಿ ಮಾತನಾಡಿ, ಸಮಾವೇಶದ ತಯಾರಿ ಭರ್ಜರಿಯಿಂದ ನಡೆದಿದ್ದು, ಅನೇಕ ಮಠಾಧೀಶರು, ಜಿಲ್ಲೆಯ ಸಚಿವ-ಸಂಸದರು, ಎಲ್ಲ ಶಾಸಕರು ಸೇರಿದಂತೆ ರಾಜ್ಯದ ಸಮಾಜ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆಂದು ತಿಳಿಸಿದರು.

ಮಾರ್ಚ 9, ರವಿವಾರದಂದು ಬಾದಾಮಿಯ ವೀರಪುಲಕೇಶಿ ವಿದ್ಯಾವರ್ಧಕ ಸಂಸ್ಥೆಯ ಬಸವಮಂಟಪದಲ್ಲಿ ಕಾರ್ಯಕ್ರಮ ಜರುಗಲಿದೆ. ಇದೇ ಸಂದರ್ಭ ಪ್ರತಿಭಾ ಪುರಸ್ಕಾರ ಹಾಗು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದೆ ಎಂದರು.

ಈ ಸಂದರ್ಭದಲ್ಲಿ ಚನ್ನಬಸಪ್ಪ ಅಥಣಿ, ಶಿವಪುತ್ರಪ್ಪ ಶಿರಸಿ, ಅಶೋಕ ಶಿವಸಿಂಪಿಗೇರ, ಅಶೋಕ ನಾಗಠಾಣ, ಚಂದ್ರಶೇಖರ ಸೂಡಿ, ಅನೀಲ ನಾಗಠಾಣ, ಗಣೇಶ ಕುಬಸದ, ಪ್ರಭಾಕರ ಮೋಳೇದ, ಕಿರಣ ಆಳಗಿ, ಮಲ್ಲಿಕಾರ್ಜುನ ತುಂಗಳ, ಸಿದ್ಲಿಂಗಪ್ಪ ತುಂಗಳ, ಬಸವರಾಜ ತಾಳಿಕೋಟಿ, ಬಸವರಾಜ ಮೋಟಗಿ, ಬಸು ಐವಳ್ಳಿ, ಮಂಜು ಉಮದಿ, ಸದಾಶಿವ ಪಾವಟೆ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ರಬಕವಿ: ಬಣಗಾರ ಭವನದ ಉದ್ಘಾಟನೆ

**ರಬಕವಿ :** ಭಾರತದಲ್ಲಿ ಸಾವಿರಾರು ಜಾತಿ-ಧರ್ಮ, ಆಚಾರ, ವಿಚಾರಗಳ ವೈವಿಧ್ಯವಿದ್ದರೂ, ಎಲ್ಲದಕ್ಕೂ ಹಿಂದೂ ಧರ್ಮವೇ ಮೂಲವಾಗಿದೆ ಎಂದು ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಹೇಳಿದರು.

ರಬಕವಿಯಲ್ಲಿ ಬಣಗಾರ (ನಾಗಲಿಕ) ಸಮಾಜದ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ಸಂತ-ದಾಸ-ಶರಣರು ಹಾಗು ಹೋರಾಟಗಾರರ ಶ್ರಮದಿಂದ ಇಂದಿಗೂ ನಮ್ಮ ದೇಶ ಉಳಿದುಕೊಂಡಿದೆ. ಧರ್ಮ ಮತ್ತು ದೇಶದ ಬಗ್ಗೆ ಜಾಗೃತಿ ಮೂಡಿಸಿಕೊಂಡು ಹೋಗುವದು ನಮ್ಮೆಲ್ಲರ ಕರ್ತವ್ಯವೆಂದು ಶ್ರೀಗಳು ತಿಳಿಸಿದರು.



ಈ ಸಂದರ್ಭದಲ್ಲಿ ಬಣಗಾರ ಸಮಾಜದ ಅಧ್ಯಕ್ಷ ಈಶ್ವರ ನಾಗರಾಳ, ಪ್ರಭು ಉಮದಿ, ಈರಣ್ಣ ಗುಣಕಿ, ಪ್ರಕಾಶ ಎಂಡಿಗೇರಿ, ಗಜಾನನ ನಾಗರಾಳ, ರೇವಣ್ಣ ಉಮದಿ, ಸಂತೋಷ ಕೌತನಳ್ಳಿ, ಪ್ರಕಾಶ ಬೀಳಗಿ, ಬಸವರಾಜ ಮಟ್ಟಿಕಲ್ಲಿ, ರಾಜು ಭಿಲವಡಿ, ಸದಾನಂದ ಜೋತಾವರ, ಮಹೇಶ ಮಟ್ಟಿಕಲ್ಲಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಬಸವಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜರುಗಿದ ಮಕ್ಕಳ ಸಂತೆ

# ತಿಂದ ನೋಡಿ ಫೋನ್‌ಪೇ ಮಾಡ್ರಿ

**ಜಮಖಂಡಿ:** 'ಮನಿಗೆ ಹೋಗಿ ತಿಂದು ನೋಡಿ ಛಲೊ ಅನಿಸಿದ್ರ ರೊಕ್ಕಾ ಫೋನ್ಪೇ ಮಾಡ್ರಿ. ಛಲೊ ಅನಿಸಲಿಲ್ಲಂಧ್ರ ರೊಕ್ಕಾ ಕೊಡಬ್ಯಾಡ್ರಿ' ಇವು ಜಮಖಂಡಿ ನಗರದ ಬಸವಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶನಿವಾರ ನಡೆದ ಮಕ್ಕಳ ಸಂತೆಯಲ್ಲಿ ಮಗುವೊಂದು ಆಡಿದ ಮಾತುಗಳಿವು.

ಚೌಕಾಸಿ ಇಲ್ರಿ, ಅಕ್ಕಾ ಬೋನಿ ಮಾಡ್ರಿ, ಕಾಕಾ ಚಿಲ್ಲರ ಕೊಡ್ರಿ, ಮನ್ಯಾಗ ಮಾಡಿದ್ದ ಐತ್ರಿ, ಐದ ರೂಪಾಯಿಗೆ ಒಂದ ಸೂಡ, ಹತ್ತ ರೂಪಾಯಿಗೆ ಮೂರ ಸೂಡ, ತಿಂದ ನೋಡಿ ರೊಕ್ಕಾ ಕೊಡ್ರಿ, ಇದು ಜವಾರಿ ಐತ್ರಿ, ಮೆಣಸಿನಕಾಯಿ ಬಾಳ ಖಾರ ಅದಾವ್ರಿ, ಟೊಮ್ಯಾಟೋ ಸ್ವಯ್ಯ ಅದಾವರ್ರಿ ಇವು ಸಂತೆಯಲ್ಲಿ ಮಕ್ಕಳಿಂದ ಕೇಳಿ ಬಂದ ತರಹೆವಾರಿ ಮಾತುಗಳು.

ಕೋತಂಬ್ರಿ, ಟೊಮ್ಯಾಟೋ, ಮೆಂತೆಪಲ್ಲೆ, ಸಬ್ಬಸಗಿಪಲ್ಲೆ, ನುಗ್ಗಿಕಾಯಿ, ಬಟಾಟಿ, ಹಸಿ ಉಳ್ಳಾಗಡ್ಡಿ, ನಿಂಬೆಹಣ್ಣು, ಬದನೆಕಾಯಿ, ಬೆಂಡೆಕಾಯಿ, ಅವರೆಕಾಯಿ, ಹೀರೆಕಾಯಿ, ಹಸಿಮೆಣಸಿನಕಾಯಿ, ಗಜ್ಜರಿ, ಸವತೆಕಾಯಿ ಸೇರಿದಂತೆ ವಿವಿಧ ತರಕಾರಿಗಳನ್ನು ಮಕ್ಕಳು ಮಾರಾಟ ಮಾಡಿದರು.



ಚಿಕ್ಕು, ಬಾಳೆಹಣ್ಣು, ಪಪ್ಪಾಯಿ, ದ್ರಾಕ್ಷಿ, ಸೇಬು, ಪೇರು ಮುಂತಾದ ಹಣ್ಣುಗಳು, ಇಡ್ಲಿ ಚಟ್ನಿ, ಹಣ್ಣಿನ ಜ್ಯೂಸ್, ತಂಪು ಪಾನೀಯಗಳು, ಹಣ್ಣಿನ ಸಲಾಡ, ಬೇರೆ ಬೇರೆ ರೀತಿಯ ಬಿಸ್ಕಿಟ್, ಚುರಮುರಿ, ಚುರಮುರಿ ಚೋಡಾ, ಬ್ರೆಡ್, ಗೊಂಜ್ಯಾಳ ತೆನೆ ಸೇರಿದಂತೆ ವೈವಿಧ್ಯಮಯ ತಿಂಡಿ ತಿನಿಸುಗಳು ಹಾಗೂ ಸ್ಟೇಷನರಿ ವಸ್ತುಗಳು, ಬಳೆಗಳು, ಕಿರಾಣಿ ಸಾಮಾನುಗಳು ಮಾರಾಟಕ್ಕಿದ್ದವು.

ಮನುಷ್ಯನ ಮೆದುಳು, ಹೃದಯ ಇತ್ಯಾದಿ ಅಂಗಾಂಗಗಳ ಹಾಗೂ ಭೌತಶಾಸ್ತ್ರ, ರಸಾಯನಶಾಸ್ತ್ರ ವಿಷಯಗಳಿಗೆ ಸಂಬಂಧಪಟ್ಟ ಪ್ರಯೋಗಳನ್ನು ಮಕ್ಕಳು ರಂಗೋಲಿಯಲ್ಲಿ ಚಿತ್ರ ಬಿಡಿಸಿದ್ದು ಪ್ರೇಕ್ಷಕರ ಗಮನ ಸೆಳೆದವು. ಪ್ರಕೃತಿ ವಿಕೋಪ, ಪರಿಸರ ಸಂರಕ್ಷಣೆ, ಗಣಿತದ ವಿನೂತನ ಲೆಕ್ಕಗಳು ಹಾಗೂ ಇಂಗ್ಲಿಷ್ ಭಾಷೆಯ ವ್ಯಾಕರಣ ಕುರಿತು ವಿವಿಧ ಮಾದರಿಗಳನ್ನು ಮಕ್ಕಳು ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನಿವೃತ್ತ ಪ್ರಾಚಾರ್ಯ ಡಾ. ಎಸ್. ಎಸ್. ಸುವರ್ಣಖಂಡಿ ಮಕ್ಕಳ ಸಂತೆಯನ್ನು, ನಿವೃತ್ತ ಪ್ರಾಚಾರ್ಯ ಪ್ರೊ. ಎಸ್. ಕೆ. ಗಿರೇಗೋಳ ವಿಜ್ಞಾನ ರಂಗೋಲಿ ಚಿತ್ರಗಳ ಪ್ರದರ್ಶನವನ್ನು, ಮುಖ್ಯ ಶಿಕ್ಷಕ ಪಿ. ಐ. ಹೊಸಮಠ ವಿಜ್ಞಾನ ವಸ್ತು ಪ್ರದರ್ಶನ ಉದ್ಘಾಟಿಸಿದ ಬಳಿಕ ಮಕ್ಕಳೊಂದಿಗೆ ಸಂವಾದ ಮಾಡಿ ಮಾಹಿತಿ ಪಡೆದುಕೊಂಡರು. ಆಡಳಿತಾಧಿಕಾರಿ ಪ್ರೊ.ಬಸವರಾಜ ಕಡ್ಡಿ, ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಹಾಜರಿದ್ದರು.

ಶಿಕ್ಷಕಿಯರಾದ ರೇಖಾ ಬುರ್ಲಿ, ಸುನಿತಾ ಕುಮಕಾಳೆ, ಆರುಂಧತಿ ಆಲಬಾಳ, ಆಸ್ಮಾ ಪಠಾಣ, ಶಿಕ್ಷಕರಾದ ರಮೇಶ ಬೀಳಗಿ, ಅಸ್ಲಮ್ ಕೆಂಗಲಗುತ್ತಿ, ರಾಜೇಸಾಬ ಶೇಖ, ಮುತ್ತು ಅಮ್ಮಣಗಿ, ಶಿಕ್ಷಕೇತರ ಸಿಬ್ಬಂದಿ ಮಕ್ಕಳ ಸಂತೆಯ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು. ಮಕ್ಕಳ ಸಂತೆ ಕುರಿತು ಪಾಲಕರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.



**ಮಹಾಲಿಂಗಪುರದ ಕೆಎಲ್‌ಇ ಪಾಲಿಟೆಕ್ನಿಕ್ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವಿದ್ಯಾರ್ಥಿಗಳು ರನ್ನವೈಭವ ನಿಮಿತ್ಯ ಬಸವೇಶ್ವರ ವೃತ್ತದಲ್ಲಿನ ಬಸ್ ನಿಲ್ದಾಣದಲ್ಲಿ ಶ್ರಮದಾನ ಮಾಡುವ ಮೂಲಕ, ಬಸ್ ನಿಲ್ದಾಣದ ಆವರಣವನ್ನು ಶುಚಿಗೊಳಿಸಿ ರನ್ನಬೆಳಗಲಿ ಕಡೆ ಹೋಗುವ ಪ್ರಯಾಣಿಕರಿಗೆ ಅನುವು ಮಾಡಿಕೊಟ್ಟರು. ಇವರಿಗೆ ಪೋಲಿಸ್ ಸಿಬ್ಬಂದಿಗಳು ಕೂಡ ಸಾಥ್ ನೀಡಿದರು. ಪ್ರಾಚಾರ್ಯ ಎಸ್. ಐ. ಕುಂದಗೋಳ ಮಾರ್ಗದರ್ಶನದಲ್ಲಿ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಹಾಗೂ ಶಿಬಿರಾರ್ಥಿಗಳು ಭಾಗವಹಿಸಿದ್ದರು.**

# ಗ್ಯಾರಂಟಿ ಯೋಜನೆಗಳಿಂದ ಜನರ ಆರ್ಥಿಕ ಮಟ್ಟ ಸುಧಾರಣೆ: ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ



**ಬಳ್ಳಾರಿ :** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿರುವ ಎಲ್‌ಇಡಿ ವಾಹನ ಹಾಗೂ ಬೀದಿ ನಾಟಕದ ಮೂಲಕ ಗ್ಯಾರಂಟಿ ಯೋಜನೆಗಳ ಪ್ರಚಾರ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು, ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಶನಿವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರ್ಕಾರವು ಬಡ ಜನರು, ಮಧ್ಯಮ ವರ್ಗದ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಲು ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ರಾಜ್ಯದಲ್ಲಿ ಆರ್ಥಿಕ ಶಕ್ತಿ ತುಂಬಿದ್ದಾರೆ ಎಂದರು.

ರಾಜ್ಯದಲ್ಲಿ ಸರ್ಕಾರದ ಪ್ರಮುಖ ಐದು ಗ್ಯಾರಂಟಿ ಯೋಜನೆಗಳನ್ನು ಶೇ.98 ರಷ್ಟು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಶೇ.100 ರಷ್ಟು ಅನುಷ್ಠಾನಗೊಳಿಸಲು ಯೋಜನೆಗಳ ಅರಿವು ಅಗತ್ಯವಾಗಿದೆ. ಹಾಗಾಗಿ ಎಲ್‌ಇಡಿ ವಾಹನವು ಬೀದಿ ನಾಟಕ ಕಾರ್ಯಕ್ರಮ ಆಯೋಜಿಸುವ ಕಲಾವಿದರ ತಂಡದೊಂದಿಗೆ ಜಿಲ್ಲೆಯ ಆಯ್ದ 20 ಗ್ರಾಮಗಳಲ್ಲಿ ಸಂಚರಿಸಿ ಗ್ರಾಮೀಣ ಭಾಗದ ಜನರಲ್ಲಿ ಗ್ಯಾರಂಟಿ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲಿದೆ ಎಂದು ಮಾಹಿತಿ ನೀಡಿದರು.

ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಯಾವುದೇ ಮಧ್ಯವರ್ತಿಗಳಿಲ್ಲದೇ ಜನರಿಗೆ ತಲುಪಿಸಿದ್ದೇವೆ. ಗ್ಯಾರಂಟಿ ಯೋಜನೆಗಳಿಂದ ಯಾರೂ ವಂಚಿತರಾಗಬಾರದು. ಅರ್ಹರು ಇವುಗಳ ಸದುಪಯೋಗ ಪಡೆದುಕೊಳ್ಳಬೇಕು. ಇದಕ್ಕಾಗಿ ಗ್ಯಾರಂಟಿ ಯೋಜನೆಗಳ ಕುರಿತ ಅರಿವು ಬಹುಮುಖ್ಯವಾಗಿ ಗ್ರಾಮೀಣ ಭಾಗದಲ್ಲಿ ಮೂಡಿಸಬೇಕು ಎಂದರು.

ಗೃಹಲಕ್ಷ್ಮಿ ?ಮ ಯೋಜನೆಯ ಕಳೆದ 16 ತಿಂಗಳ ಎಲ್ಲಾ ಕಂತಿನ ಹಣವನ್ನು ಗೃಹಲಕ್ಷ್ಮಿ ?ಮೇಯರ ಖಾತೆಗೆ ಜಮೆ ಮಾಡಲಾಗಿದೆ. ಕೆಲವು ತಾಂತ್ರಿಕ ಕಾರಣಗಳಿಂದಾಗಿ ಕಳೆದ 3 ತಿಂಗಳ ಗೃಹಲಕ್ಷ್ಮಿ ಹಣ ಬಂದಿಲ್ಲ. ಈಗಾಗಲೇ ಮುಖ್ಯಮಂತ್ರಿಯವರು, ಇಲಾಖಾ ಸಚಿವರು ಮುಂದಿನ ದಿನಗಳಲ್ಲಿ ಹಣ ಪಾವತಿಸುವ ಕುರಿತು ತಿಳಿಸಿದ್ದಾರೆ ಎಂದರು.

ಅದೇರೀತಿಯಾಗಿ ಅನ್ನಭಾಗ್ಯ ಯೋಜನೆಯಡಿ 5 ಕೆಜಿ ಅಕ್ಕಿಯ ಬದಲಾಗಿ ನೀಡುವ ಹಣವು ಜಮೆಯಾಗಿಲ್ಲ. ಬಾಕಿ ಇರುವ ಹಣ ಪಾವತಿ ಜೊತೆಗೆ ಮುಂದಿನ ತಿಂಗಳಿನಿಂದ ಎಲ್ಲಾ ಅರ್ಹ ಪಡಿತರಿಗೆ ಕೊಟ್ಟ ಮಾತಿನಂತೆ 10 ಕೆಜಿ ಅಕ್ಕಿಯನ್ನು ವಿತರಿಸಲಾಗುತ್ತದೆ ಎಂದು ತಿಳಿಸಿದರು.

ರಾಜ್ಯಸರ್ಕಾರವು ಗ್ಯಾರಂಟಿ ಯೋಜನೆಗಳನ್ನು ಅರ್ಹರಿಗೆ ಕಡ್ಡಾಯವಾಗಿ ತಲುಪಿಸಬೇಕೆಂಬ ಬದ್ಧತೆಯನ್ನು ಹೊಂದಿದೆ. ತಲುಪಿಸುವಲ್ಲಿ ವಿಳಂಬವಾಗಬಹುದು. ಈ ಕುರಿತು ಜನರು ಊಹಾಪೋಹಗಳಿಗೆ ಕಿವಿಕೊಡಬಾರದು ಎಂದರು. ಈ ವೇಳೆ ಮುಖಂಡರಾದ ವೆಂಕಟೇಶ್ ಹೆಗಡೆ, ಲಿಂಗರಾಜ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಥಮದರ್ಜೆ ಸಹಾಯಕ ವಿ.ಸಿ.ಗುರುರಾಜ, ಸಿಬ್ಬಂದಿ ಹನುಮೇಶ್.ಹೆಚ್., ಕಲಾವಿದರಾದ ಎಸ್.ಎಂ.ಹುಲುಗಪ್ಪ, ಹೆಚ್.ಜಿ.ಸುಂಕಪ್ಪ, ಡಿ.ಹೇಮಂತ್, ರ್ರಿಸ್ವಾಮಿ, ಹನುಮಯ್ಯ ತಿಮ್ಮಲಾಪುರ ಹಾಗೂ ಇತರರು ಇದ್ದರು.

# ಎಪಿಎಂಸಿ ಕಾರ್ಯದರ್ಶಿಗಳನ್ನು ಭೇಟಿ ಮಾಡಿದ ಬಿಡಿಸಿಸಿಐ ಯಶವಂತರಾಜ್ ನಾಗಿರೆಡ್ಡಿ ನಿಯೋಗ




**ಬಳ್ಳಾರಿ :** ಬಳ್ಳಾರಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಒಣ ಮೆಣಸಿನಕಾಯಿ ಮಾರುಕಟ್ಟೆಯನ್ನು ತ್ವರಿತವಾಗಿ ಪ್ರಾರಂಭಿಸಲು ಕೋರಿ ಎಪಿಎಂಸಿ ನಿರ್ದೇಶಕರಾದ ಶಿವಾನಂದ ಕಪಾಸಿ ಅವರನ್ನು ಹುಬ್ಬಳ್ಳಿಯಲ್ಲಿ ಭೇಟಿ ಮಾಡಿದ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಯಶವಂತರಾಜ್ ನಾಗಿರೆಡ್ಡಿ ಅವರ ನೇತೃತ್ವದಲ್ಲಿ ನಿಯೋಗ ಮನವಿ ಮಾಡಿದೆ.

ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರು, ಬಳ್ಳಾರಿಗೆ ಭೇಟಿ ನೀಡಿದಾಗ ಬಳ್ಳಾರಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಒಣ ಮೆಣಸಿನಕಾಯಿ ಮಾರುಕಟ್ಟೆಯನ್ನು ತ್ವರಿತವಾಗಿ ಪ್ರಾರಂಭಿಸಲು ಐದು ಕೋಟಿ ರೂಪಾಯಿ ಅನುದಾನ ನೀಡಲಾಗುತ್ತದೆ ಎಂದು ಘೋಷಣೆ ಮಾಡಿದ್ದನ್ನು ನೆನಪಿಸಿದ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಮತ್ತು ಜಂಟಿ ಕಾರ್ಯದರ್ಶಿ ವಿ. ರಾಮಚಂದ್ರ ಅವರು ಈ ಮನವಿ ಸಲ್ಲಿಸಿದ್ದಾರೆ. ಬಳ್ಳಾರಿ ಎಪಿಎಂಸಿ ಮಾರುಕಟ್ಟೆಯ ಸ್ಥಳಾಂತರ ಮತ್ತು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸೇವಾ ಕಾರ್ಯಗಳಿಗೆ ಸೂಕ್ತ ನಿವೇಶನ ನೀಡಲು ಕೋರಿದರು.

# ಶ್ರೀ ಅಭಯ ಆಂಜನೇಯ ಸ್ವಾಮಿ ನೂತನ ವಿಗ್ರಹ ಪ್ರಾಣಪ್ರತಿಷ್ಠಾಪನೆ



**ಬಳ್ಳಾರಿ :** ನಗರದ ಸಿರುಗುಪ್ಪ ರಸ್ತೆ ಶಿಲ್ಪಿ ನಗರದ ಲ್ಲಿ ನೂತನವಾಗಿ ಶ್ರೀ ಅಭಯ ಆಂಜನೇಯ ಸ್ವಾಮಿ ನೂತನ ವಿಗ್ರಹ ಪ್ರಾಣ ಪ್ರತಿಷ್ಠಾಪನೆ ಪೂಜೆಗಳನ್ನು ಭಕ್ತಾದಿಗಳ ಸಮಕ್ಷದಲ್ಲಿ ನೆರವೇರಿಸಲಾಯಿತು ಎಂದು ತಿಳಿಸಿದ್ದಾರೆ.

ಬೆಳಿಗ್ಗೆ 8.00 ಗಂಟೆಗೆ ಧ್ವಜಾರೋಹಣ, ಗಂಗಾಪೂಜೆ, ಮಹಾ ಗಣಪತಿ ಪೂಜೆ, ಮುಂಜಾನೆ ಆವಾಹಿತ ದೇವತಾ ಪೂಜೆ 8.20 ನಿ? ಕೈ ಮೀನಾ ಲಗ್ನದ ಶುಭ ಮುಹೂರ್ತದಲ್ಲಿ ವಿಗ್ರಹ ಪ್ರಾಣ ಪ್ರತಿಷ್ಠಾಪನೆ ಪ್ರತಿಷ್ಠಾಹೋಮ ಜಯಾದಿಹೋಮ, ಪ್ರಾಯಶ್ಚಿತ್ತ ಹೋಮ ಬಲಿಹರಣ ಕುಂಭಾಭಿಷೇಕ, ಅಲಂಕಾರ ಪೂಜಾ ಮಂಗಳಾರತಿ, ಮಂತ್ರ ಪುಷ್ಪ ಮತ್ತು ಪೂರ್ಣವುತಿ ತೀರ್ಥ ಪ್ರಸಾದ ವಿನಿಯೋಗ ಪುಣ್ಯಾಹವಾಚನ, ಮಾತೃಕಾ ಪೂಜೆ, ದೇವನಾಂದಿ, ಆಚಾರ್ಯಾದಿ ಋತ್ವಿಗ್ವರಣ, ರಕ್ಷಾಬಂಧನ, ನವಗ್ರಹ, ಪಂಚಬ್ರಹ್ಮಕಲಶ ಸ್ಥಾಪನೆ. ಅಗ್ನಿಪ್ರತಿಷ್ಠಾಪನೆ, ಜಲಾಧಿವಾಸ, ಕ್ಷೀರಾಧಿವಾಸ, ನವಗ್ರಹ, ಪಂಚಬ್ರಹ್ಮ, ರಾಕ್ಷೆಜ್ಞ, ವಾಸ್ತು ಹೋಮಗಳು, ಧ್ಯಾನ್ಯಾಧಿವಾಸ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ಸಂಜೆ ದೇವತಾ ಪೂಜಾ, ವಾಸ್ತು ರಾಕ್ಷೆಜ್ಞ ಪ್ರಧಾನ ದೇವತಾ ಹೋಮಗಳು, ಶಯ್ಯಾಧಿವಾಸ, ಮಂಗಳಾರತಿ ನಡೆಸಲಾಯಿತು ಎಂದು ಮುಖ್ಯ ಅರ್ಚಕರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮಾಜಿ ಗಾಲಿ ಸೋಮಶೇಖರ್ ರೆಡ್ಡಿ, ಮುಖಂಡರು ಗಾಲಿ ಲಕ್ಷ್ಮಿ ಅರುಣ, ಕಂಟ್ರಾಕ್ಟರ್ ಭೂಪಾಲ್ ರೆಡ್ಡಿ, ದೇವಸ್ಥಾನದ ಪ್ರಮುಖರು ಪ್ರವೀಣ್ ರೆಡ್ಡಿ, ಶಿಲ್ಪಿ ವೀರೇಶ್, ಶಿಲ್ಪಿ ಶಿವಕುಮಾರ್ ಆಚಾರಿ, ಮೇಸ್ತ್ರಿ ರಘು, ಬಿ ಮಹೇಶ್, ಮೇಸ್ತ್ರಿ ರಾಘವೇಂದ್ರ ಯಾದವ್, ರಕ್ಷಣಾ ವೇದಿಕ ವೆಂಕಯ್ಯ, ಟಿ ವೆಂಕಟ ನಾರಾಯಣಸ್ವಾಮಿ, ಎಚ್ ರಾಮಾಂಜಿನಿ , ಮಾಬು, ಆಟೋ ಮೋಹನ್, ಉಮಾಪತಿ, ಕರಿಯಪ್ಪ, ಗೋವಿಂದಯಾದವ್, ಮಾರಣ್ಣ ಸೇರಿದಂತೆ ಇತರ ಭಕ್ತಾದಿಗಳು ಭಾಗವಹಿಸಿದ್ದರು.

# ಗೌತಮ್ ನಗರ (ಡಿ.ಸಿ. ನಗರ)ದಲ್ಲಿ ಸಾರ್ವಜನಿಕರ ರಸ್ತೆ ಒತ್ತುವರಿ: ತೆರವುಗೊಳಿಸಲು ಲೋಕಾಯುಕ್ತಕ್ಕೆ ದೂರು



**ಬಳ್ಳಾರಿ :** ನಗರದ ಬೆಳಗಲ್ಲು ರಸ್ತೆಯಲ್ಲಿರುವ ಗೌತಮ್ ನಗರದಲ್ಲಿ ಸರ್ಕಾರದ ವತಿಯಿಂದ ಅಂದಿನ ಜಿಲ್ಲಾಧಿಕಾರಿಗಳಾದ ಗೌರಿ ಎಸ್ ತ್ರಿವೇದಿ ಅವರು ಬಡಾವಣೆಯನ್ನು ನಿರ್ಮಿಸಿ ಬಡಜನರಿಗೆ ವಸತಿ ಹೀನರಿಗೆ ನಿವೇಶನಗಳನ್ನು ನೀಡಿ ಆಶ್ರಯ ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದರು. ಈ ಸಂದರ್ಭದಲ್ಲಿ ಬಡಾವಣೆಯ ನಿಯಮಗಳ ಪ್ರಕಾರ 40 ಅಡಿ ಅಗಲದ ಮುಖ್ಯರಸ್ತೆಯನ್ನು ಆ ಬಡಾವಣೆಯಲ್ಲಿ ನಿರ್ಮಿಸಲಾಗಿತ್ತು. ಈ ರಸ್ತೆಯು ಬಂಡಿಹಟ್ಟಿಯಿಂದ ಡಿಸಿ ನಗರ ಮಾರ್ಗವಾಗಿ ಬೆಳಗಲ್ ರಸ್ತೆಯನ್ನು ತಲುಪುತ್ತಿತ್ತು. ಈ ಮುಖ್ಯ ರಸ್ತೆಯನ್ನು ಕೆಲವರು 40 ಅಡಿ ಅಗಲ ಸುಮಾರು 200 ಅಡಿ ಉದ್ದ ಅತಿಕ್ರಮಿಸಿಕೊಂಡು ರಸ್ತೆಯನ್ನು ಬಂದ್ ಮಾಡಿರುತ್ತಾರೆ. ಈ ವಿಷಯವಾಗಿ ಹಲವಾರು ಸಲ ಪಾಲಿಕೆ ಅಧಿಕಾರಿಗಳಲ್ಲಿ ಮನವಿ ಮಾಡಿದರು ಸಹ ಸಾರ್ವಜನಿಕರ ಮನವಿಯನ್ನು ಲೆಕ್ಕಿಸದೆ ಪಾಲಿಕೆ ಅಧಿಕಾರಿಗಳು ನಿರ್ಲಕ್ಷ ವಹಿಸಿರುತ್ತಾರೆ.

ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಅತಿಕ್ರಮಿತ ರಸ್ತೆಯನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸಾಮಾಜಿಕ ಹೋರಾಟಗಾರ ಜಿ ಎಮ್ ಪ್ರಕಾಶ್ ರೆಡ್ಡಿ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಈ ದೂರಿಗೆ ಸ್ಪಂದಿಸಿದ ಲೋಕಾಯುಕ್ತ ಅಧಿಕಾರಿಗಳು ಸ್ಥಳಕ್ಕೆ ಖುದ್ದಾಗಿ ಆಗಮಿಸಿ ಪರಿಶೀಲಿಸಿ ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಪ್ರಕಾಶ್ ರೆಡ್ಡಿ ತಿಳಿಸಿದ್ದಾರೆ.



**ಲೋಕಾಪುರ:** ಮುಧೋಳದಲ್ಲಿ ನಡೆದ ಪ್ರಾಥಮಿಕ ವಿಭಾಗದ ಉರ್ದು ಕ್ಲಸ್ಟರ್ ಮಟ್ಟದ 1 ರಿಂದ 5 ನೇ ತರಗತಿ ವಿದ್ಯಾರ್ಥಿಗಳ ಎಫ್ ಎಲ್ ಎನ್ ಕಲಿಕಾ ಹಬ್ಬ ಕಾರ್ಯಕ್ರಮದಲ್ಲಿ ಲೋಕಾಪುರ ಪಟ್ಟಣದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಮಕ್ಕಳು ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಹಾಗೂ ಇನ್ನಿತರ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರ ಪಡೆದುಕೊಂಡರು. ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ಶಬ್ಬೀರ ಗುಲಾಬಸಾಬ ಅತ್ತಾರ, ಶಾನೂರ ನದಾಫ, ಮುಖ್ಯ ಶಿಕ್ಷಕ ಜಾಕೀರಹುಸೇನ ಬಾಗವಾನ, ಎಸ್.ಎಸ್. ಅಂಗಡಿ, ಮಂಜುಳಾ ಉದಪುಡಿ, ಎಸ್‌ಡಿಎಂಸಿ ಸದಸ್ಯರು, ಶಿಕ್ಷಕವೃಂದ, ಮಕ್ಕಳು ಇದ್ದರು.

# ಪೇಜಾವರ ಶ್ರೀಗಳಿಂದ ದಲಿತ ಕೇರಿಗಳಲ್ಲಿ ಪಾದಯಾತ್ರೆ



**ಮುಧೋಳ :** ನಗರದ ಎ.ಪಿ. ಎಂ.ಸಿ. ಪಕ್ಕದ ಲಂಬಾಣಿ ತಾಂಡಾ, ಸುಡುಗಾಡು ಸಿದ್ಧರ ಓಣಿಗಳು ಸೇರಿದಂತೆ ಇಲ್ಲಿನ ದಲಿತರ ಕೇರಿಗಳಲ್ಲಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀ ಪಾದಂಗಳವರು ಪಾದಯಾತ್ರೆ ಮಾಡಿದರು. ಶುಕ್ರವಾರ ಮಧ್ಯಾಹ್ನ ನಗರದಲ್ಲಿ ನಡೆದ ಪಾದಯಾತ್ರೆ ಸಂಧರ್ಭದಲ್ಲಿ ಧಾರವಾಡ ಮಠದ ಪೀಠಾಧಿಪತಿಗಳು , ಬಸವರಾಜ ಮಾನೆ, ಸೋನಪ್ಪಿ ಕುಲಕರ್ಣಿ, ನಿಂಗನಗೌಡಾ ನಾಡಗೌಡ, ರಾಜು ಟಂಕಸಾಲಿ, ವೆಂಕನಗೌಡ ನಾಡಗೌಡ, ಬಸವರಾಜ ದಾಸರ, ಉದಯ ವಾಳ್ವೇಕರ, ಕಮಲಾ ಜೇಡರ, ಸಂಜಯ ಬಾಜಿ ಸೇರಿದಂತೆ ಹಲವಾರು ಜನರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

# ನಗರದ ಸೇವಾ ಬಸ್ತಿಗಳಲ್ಲಿ ಶ್ರೀಗಳ ಪಾದಯಾತ್ರೆ ಧರ್ಮ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ: ಪೇಜಾವರ ಶ್ರೀ



**ಮುಧೋಳ :** ಧರ್ಮ ರಕ್ಷಣೆಯಿಂದ ದೇಶ ಜಾಗೃತಿ ಯಾಗುತ್ತದೆ. ಧರ್ಮ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಉಡುಪಿ ಪೇಜಾವರ ಮಠದ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ತಿಳಿಸಿದರು.

ಆನಂದ ನಗರದ ಆರ್. ಎಸ್.ಎಸ್. ಉದ್ಯೋಗ ಶಾಖೆ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಸೇವಾ ಬಸ್ತಿಗಳಲ್ಲಿ ಶ್ರೀಗಳು ಪಾದಯಾತ್ರೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಪಾದಯಾತ್ರೆಯಲ್ಲಿ ಕಿರೇಸೂರ ಮಠದ ಪೀಠಾಧಿಪತಿಗಳಾದ ಷ. ಬ್ರ. ವೇ ಮೂ ಗೌರೀಶಂಕರ ದೇವರು, ಶಿರೋಳ ಕಾಡಸಿದ್ಧೇಶ್ವರ ಮಠದ ಅರ್ಚಕರು, ಹಂಸನೂರ ಮಠದ ಅಭಿನವ ಬಸವರಾಜೇಂದ್ರ ಮಹಾ ಸ್ವಾಮಿಗಳು, ಮುಧೋಳದ ಯಲ್ಲಾಲಿಂಗ ಮಠದ ಚೆನ್ನಯ್ಯ ಸ್ವಾಮಿಗಳು, ಆರ್. ಎಸ್. ಎಸ್. ಪ್ರಾಂತ ಪ್ರಚಾರಕ ನರೇಂದ್ರಜಿ, ವಿಭಾಗ ಪ್ರಚಾರಕ ರಾವಸಾಹೇಬಜಿ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪ್ರಮೋದ್ ಮಮದಾಪೂರ ಪಾದಯಾತ್ರೆಯಲ್ಲಿ ಪಾಲ್ಗೊಂಡಿ ದ್ದರು.

ಪ್ರಾರಂಭದಲ್ಲಿ ಕೊಳಚೆ ಪ್ರದೇಶದ ದುರ್ಗಾದೇವಿ ಮಂದಿರದಲ್ಲಿ ಪೂಜೆ, ಮಹಾ ಮಂಗಳಾರತಿ, ಗೋಪೂಜೆಯೊಂದಿಗೆ ಪ್ರಾರಂಭಗೊಂಡ ಪಾದಯಾತ್ರೆ ಪ್ರಗತಿ ಶಾಲೆ ಪಕ್ಕದ ಬಂಜಾರಾ ಸೇವಾ ಬಸತಿಯ ದುರ್ಗಾದೇವಿ ಮಂದಿರ ಹಾಗೂ ಸಂತ ಸೇವಾಲಾಲ್ ಮಂದಿರಕ್ಕೆ ಮುಕ್ತಾಯಗೊಂಡಿತು.

ಪಾದಯಾತ್ರೆಯಲ್ಲಿ ಮಲ್ಲು ಮಾದನ ಶೆಟ್ಟಿ, ನಿಂಗನಗೌಡ ನಾಡಗೌಡ, ಉದಯ ವಾಳ್ವೇಕರ, ಶಂಕರ ನಾಯಿಕ, ಬಸು ದಾಸರ, ವೆಂಕನಗೌಡ ನಾಡಗೌಡ, ಸೋನಾಪಿ ಕುಲಕರ್ಣಿ, ಬಸವರಾಜ ಮಾನೆ, ಶ್ರೀನಿವಾಸ ಬಿರಾದಾರ ಪಾಟೀಲ್, ಗೋವಿಂದ ಕೊಡಗ, ಗಣೇಶ ರಾಠೋಡ, ಮೋಹನ ರಿಸಬೂಡ, ಕಮಲಾ ಜೇಡರ್,

ಸುನೀಲ ಪವಾರ, ಆನಂದ ಬನ್ನೂರ, ಈರಣ್ಣ ಖ್ಯಾಡಿ, ಮಹಾಗುಂಡ ಬೂದಿ, ಪ್ರಕಾಶ ಮುಂಡೆ, ಕೇದಾರಿ ಕದಂ, ಶಿವಾನಂದ ಕಾಮಗೊಂಡ ಉಪಸ್ಥಿತರಿದ್ದರು.

ಎಲ್ಲಾ ಸೇವಾ ಬಸತಿಗಳಲ್ಲಿ ಸ್ವಯಂ ಪ್ರೇರಿತವಾಗಿ ಬಣ್ಣ ಬಣ್ಣದ ರಂಗೋಲಿ ಹಾಕಿ, ಹೂವು ಹಾಕಿ, ಶ್ರೀಗಳು ಆಗಮಿಸುವ ಮಾರ್ಗದುದ್ದಕ್ಕೂ ತಳಿರು ತೋರಣ ಕಟ್ಟಿ ಶೃಂಗರಿಸಲಾಗಿತ್ತು. ಸೇವಾ ಬಸತಿಗಳಲ್ಲಿ ಮಠಾಧೀಶರುಗಳಿಗೆ, ಸಾರ್ವಜನಿಕರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಪಾದಯಾತ್ರೆಯಲ್ಲಿ ರಾಮ ತಾರಕ ಮಂತ್ರಪಠಣ, ಮಠಾಧೀಶರಿಗೆ, ಶ್ರೀರಾಮನಿಗೆ ಘೋಷಣೆಗಳನ್ನು ಕೂಗಲಾಯಿತು.

ನಗರದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು.


**Form iv**

**(See Rule 8)**

Statement about ownership and other paticulars about neewspaper **(SIHI KAHI)** to be published in the first issue every year after the last day of February

1) Place of Publication : Chittaragi Cross, S.C. Colony, Ward No. 9, **AMINGADA-587112,** Tq. Hungund Dist : Bagalkot KARNATAKA State

2) Periodicity of its Publication : Kannada Daily Morning

3) Printer's Name : **MARUTI BASAVANTAPPA HOASAMANI**
 * Nationality : INDIAN
 * Address : Chittaragi Cross, S.C. Colony, Ward No. 9, **AMINGADA-587112,** Tq. Hungund Dist : Bagalkot KARNATAKA State

4) Publisher's Name : **MARUTI BASAVANTAPPA HOASAMANI**
 * Nationality : INDIAN
 * Address : Chittaragi Cross, S.C. Colony, Ward No. 9, **AMINGADA-587112,** Tq. Hungund Dist : Bagalkot KARNATAKA State

5) Editor's Name : **MARUTI BASAVANTAPPA HOASAMANI**
 * Nationality : INDIAN
 * Address : Chittaragi Cross, S.C. Colony, Ward No. 9, **AMINGADA-587112,** Tq. Hungund Dist : Bagalkot KARNATAKA State

6) Name of Printing Press: **SUDIN PRINTERS**
 * Nationality : INDIAN
 * Address : Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101** Dist : Bagalkot, Karanataka State

7) Names and Address of individuals who won the newspaper and partners of shareholders holding more than one percent of the total capital.

I **MARUTI BASAVANTAPPA HOASAMANI** here by declare that the particulars given above are true to the best of my knowledge and belief.

**Bagalkot**
**Dated : 27-02-2025**

sd/-
**MARUTI BASAVANTAPPA HOASAMANI**
Signature of Publisher


**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State